ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಮೈಸೂರು, ಬುಧವಾರ, ೨೧, ಜನವರಿ, ೨೦೨೬ (ಮಾಘ, ೦೧, ಶಕವರ್ಷ, ೧೯೪೭) MYSURU, WEDNESDAY, 21, JANURAY, 2026 (MAGHA, 01, SHAKAVARSHA, 1947)	ಸಂಚಿಕೆ ೦೭ Issue 07

ಭಾಗ ೬ಎ

ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.

ಅಧಿಸೂಚನೆ

ಸಂಖ್ಯೆ : ಮುನಪಂ:ಕೌನ್ಸಿಲ್ ಸಭೆ:09:2025-26

ಮುಲ್ಕಿ ನಗರ ಪಂಚಾಯತ್
ಕಾರ್ನಾಡು ಗಾಂಧಿ ಮೈದಾನದ ಎದುರು,
ಮುಲ್ಕಿ ತಾಲೂಕು,
ದಕ್ಷಿಣ ಕನ್ನಡ ಜಿಲ್ಲೆ – 574154
ದಿನಾಂಕ : 19.01.2026

ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ನಡೆಸುತ್ತಿರುವ ಉದ್ದಿಮೆ ನಡೆಸುತ್ತಿರುವ ವ್ಯಾಪಾರಸ್ಥರಿಗೆ ವಿಧಿಸಲಾಗುತ್ತಿದ್ದ ಉದ್ದಿಮೆ ಪರವಾನಿಗೆ ಶುಲ್ಕವನ್ನು, ಘನತ್ಯಾಜ್ಯ ವಿಲೇವಾರಿ ಸೇವಾ ಶುಲ್ಕವನ್ನು 2026-27ನೇ ಸಾಲಿನಿಂದ ಪರಿಷ್ಕರಿಸುವ ಕುರಿತು ಹಾಗೂ ಕಟ್ಟಡ ನಿರ್ಮಾಣ ಮತ್ತು ಕೆಡುಹುವಿಕೆ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 (Construction And Demolition Waste Management Rules 2016) ರೀತ್ಯಾ ವೈಜ್ಞಾನಿಕ ವಿಲೇವಾರಿ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮ 2016 , ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ತಿದ್ದುಪಡಿ ನಿಯಮಗಳು 2021 ಮತ್ತು ಏಕ ಬಳಕೆಯ ಪ್ಲಾಸ್ಟಿಕ್ ಬಳಕೆ, ಬೃಹತ್ ತ್ಯಾಜ್ಯೋತ್ಪಾದಕರ (Bulk waste Generators) ಹಾಗೂ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮ 2016 ಕ್ಕೆ ಹಾಗೂ ಇತರೆ ಆರೋಗ್ಯ ಶಾಖೆಗೆ ಸಂಬಂಧಿಸಿದ ಸೇವಾ ಶುಲ್ಕಗಳು ಮತ್ತು ದಂಡನೆಗಳು, ಕಂದಾಯ ಶಾಖೆಗೆ ಸಂಬಂಧಿಸಿದ ಸೇವಾ ಶುಲ್ಕಗಳು ಮತ್ತು ದಂಡನೆಗಳು, ತಾಂತ್ರಿಕ ಶಾಖೆಗೆ ಸಂಬಂಧಿಸಿದ ಸೇವಾ ಶುಲ್ಕಗಳು ಮತ್ತು ದಂಡನೆಗಳು ಹಾಗೂ ಇನ್ನಿತರೆ ಕ್ರಮಗಳನ್ನು ಕೈಗೊಳ್ಳಲು ರಚಿಸಿರುವ **ಮುಲ್ಕಿ ನಗರ ಪಂಚಾಯತ್ 2026-27 ರ ಕರಡು ಉಪನಿಯಮವನ್ನು ಅಳವಡಿಸಿಕೊಳ್ಳಲು ದಿನಾಂಕ 02.01.2026** ರಂದು ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಅನುಮೋದಿಸಿರುವುದರಿಂದ, ಸದರಿ ಉದ್ದೇಶಿಸಿರುವ ಕರಡು ಉಪನಿಯಮಗಳಿಂದ ಬಾಧಿತರಾಗುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964 ಪ್ರಕರಣ 324 ರ ಉಪ ಪ್ರಕರಣ 4 ರಲ್ಲಿ ನಿಗದಿ ಪಡಿಸಿದಂತೆ ಪ್ರಕಟಿಸಲಾಗಿದೆ ಮತ್ತು ಸದರಿ

ಕರಡನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ 30 ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಇಲ್ಲಿ ಸೂಚನೆ ನೀಡಲಾಗಿದೆ.

ಮೇಲೆ ನಿರ್ದಿಷ್ಟ ಪಡಿಸಿದ ಅವಧಿ ಮುಗಿಯುವ ಮೊದಲು ಸದರಿ ಕರಡು ಉಪನಿಯಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯಿಂದ ಮುಲ್ಕಿ ನಗರ ಪಂಚಾಯತ್ ಸ್ವೀಕರಿಸಬಹುದಾದ ಅಕ್ಷೇಪಣೆ ಅಥವಾ ಸಲಹೆಯನ್ನು ಮುಲ್ಕಿ ನಗರ ಪಂಚಾಯತ್ ಪರಿಗಣಿಸುತ್ತದೆ. ಅಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಮುಖ್ಯಾಧಿಕಾರಿಗಳು, ಮುಲ್ಕಿ ನಗರ ಪಂಚಾಯತ್, ಕಾರ್ನಾಡು ಗಾಂಧಿ ಮೈದಾನ ಎದುರು, ಮುಲ್ಕಿ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ – 574154 ಗೆ ತಿಳಿಸಬಹುದು.

ಮುಲ್ಕಿ ನಗರ ಪಂಚಾಯತ್ 2026-27 ರ ಕರಡು ಉಪ ನಿಯಮಗಳು

1. ಹೆಸರು ಪ್ರಾರಂಭ ಮತ್ತು ಅನ್ವಯಿಸುವಿಕೆ :

ಅ) ಈ ಕರಡು ಉಪನಿಯಮಗಳನ್ನು ಮುಲ್ಕಿ ನಗರ ಪಂಚಾಯತ್‌ನ ಕರಡು ಉಪ ನಿಯಮಗಳು, 2026-27 ಎಂದು ಕರೆಯತಕ್ಕದ್ದು.

ಆ) ಈ ಕರಡು ಉಪ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು : ಈ ಉಪನಿಯಮಗಳಲ್ಲಿ ಸಂದರ್ಭಾನುಸಾರ ಅಗತ್ಯವೆನಿಸಿದ ಹೊರತು –

1) "ಏಜೆನ್ಸಿ ಅಥವಾ ಸೇವಾದಾತರು" ಅಂದರೆ, ಘನತ್ಯಾಜ್ಯ ನಿರ್ವಹಣಾ ನಿಯಮಗಳಡಿಯ ಅಧಿಕೃತ ಸೇವಾದಾತರೂ ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಯಿಂದ ಅದರ ಪರವಾಗಿ ಕಾರ್ಯ ಚಟುವಟಿಕೆಗಳನ್ನು ನಡೆಸುವ ಸಲುವಾಗಿ ನಿಯಮಿಸಲ್ಪಟ್ಟ ಅಥವಾ ಅಧಿಕೃತಗೊಳಿಸಿದ ಮತ್ತು ಈ ಉಪವಿಧಿಗಳಡಿಯಲ್ಲಿ ಎಂದರೆ ಕಾರ್ಮಿಕ ಅಧಿನಿಯಮಗಳನ್ನೂ ಒಳಗೊಂಡಂತೆ ಅನ್ವಯವಾಗುವಂತಹ ಎಲ್ಲಾ ನಿಯಮಗಳನ್ನು ಪಾಲನೆ ಮಾಡುವ ವಿಧಾನದಲ್ಲಿ ಕರ್ತವ್ಯಗಳನ್ನು ನಿರ್ವಹಿಸುವಂತಹ ಯಾವುದೇ ಸ್ವಸಹಾಯ ಗುಂಪುಗಳು, ನೋಂದಾಯಿಸಲ್ಪಟ್ಟ ಸಂಘ, ಚಿಂದಿ ಆಯುವವರು ಹಾಗೂ ಅಥವಾ ತ್ಯಾಜ್ಯ ವ್ಯಾಪಾರಿಗಳ ಇತರೆ ಯಾವುದೇ ನೊಂದಾಯಿತ ಘಟಕಗಳನ್ನು ಒಳಗೊಂಡಂತೆ ನ್ಯಾಸ, ಕಂಪನಿ, ಪಾಲುದಾರಿಕೆ ಸಂಸ್ಥೆ, ಪರಿಮಿತ ಹೊಣೆಗಾರಿಕೆ ಪಾಲುದಾರಿಕೆ ಮತ್ತು / ಅಥವಾ ಯಾವುದೇ ಇತರ ನೋಂದಾಯಿತ ಸಂಸ್ಥೆ

2) "ಜೈವಿಕ ವೈದ್ಯಕೀಯ ತ್ಯಾಜ್ಯ" ಅಂದರೆ, (i) ಮಾನವನ ಅಥವಾ ಪ್ರಾಣಿಗಳ ಅಥವಾ ತತ್ಸಂಬಂಧಿತ ಸಂಶೋಧನಾ ಕಾರ್ಯ ಚಟುವಟಿಕೆಗಳ ಸಂದರ್ಭದಲ್ಲಿ ರೋಗ ಪರೀಕ್ಷೆ, ಚಿಕಿತ್ಸೆ ಅಥವಾ ರೋಗ ಪ್ರತಿ ರಕ್ಷಣೆಗಳಿಂದ ಅಥವಾ (ii) ಜೀವಿಗಳು ಅಥವಾ ಸೂಕ್ಷ್ಮ ಜೀವಿಗಳಿಂದ ಉತ್ಪಾದನೆ ಅಥವಾ ಪರೀಕ್ಷೆಗಾಗಿ ತಯಾರಿಸಲಾದ ಅಥವಾ ಜೀವ ರಸಾಯನ ಕ್ರಿಯೆಗಳ ಉತ್ಪನ್ನಗಳು ಅಥವಾ / ಮತ್ತು ಮಾನವನ ಅಥವಾ ಪ್ರಾಣಿಗಳ ಮತ್ತು ತತ್ಸಂಬಂಧಿತ

ಸಂಶೋಧನಾ ಪ್ರಕ್ರಿಯೆಗಳಲ್ಲಿ ರೋಗ ಪರೀಕ್ಷೆ, ರೋಗ ಪ್ರತಿರಕ್ಷಣೆ ಅಥವಾ ಚಿಕಿತ್ಸೆಯಲ್ಲಿ ಬಳಕೆ ಮಾಡಲು ಉದ್ದೇಶಿಸಲಾದ ಜೀವ ರಾಸಾಯನಿಕ ಪ್ರತಿಕ್ರಿಯೆ (ಪ್ರತಿವರ್ತನೆ) ವಸ್ತುಗಳು.

3) "ಬೃಹತ್ ಉದ್ಯಾನ/ ತೋಟಗಾರಿಕೆ ತ್ಯಾಜ್ಯಗಳು" ಅಂದರೆ, ಪ್ರಾಥಮಿಕ ತ್ಯಾಜ್ಯ ಸಂಗ್ರಹಣೆ ವ್ಯವಸ್ಥೆಯ ಮೂಲಕ ಸಂಗ್ರಹಿಸಲು ಸಾಧ್ಯವಿಲ್ಲದ ಉದ್ಯಾನವನಗಳು, ತೋಟಗಳು, ಸಂಚಾರಿ ದ್ವೀಪಗಳು, ರಸ್ತೆ ವಿಭಜಕಗಳು ಮತ್ತು ಅದೇ ಮಾದರಿಯ ಇತರ ಸ್ಥಳಗಳಿಂದ ಸಂಗ್ರಹಿಸಲಾಗುವ ಹುಲ್ಲು, ಮರದ ಚೂರುಗಳು, ಅತಿ ಹೆಚ್ಚಿನ ಪ್ರಮಾಣದ ಇಂಗಾಲವನ್ನು ಒಳಗೊಂಡಿರುವಂತಹ ಸಣ್ಣ ಗಿಡಗಳು, ಕೊಂಬೆಗಳು, ಸಣ್ಣ ರೆಂಬೆಗಳು, ಮರದ ತೊಗಟೆಗಳು, ಹುಲ್ಲು ಅಥವಾ ಒಣಗಿದ ಎಲೆಗಳು, (ಕತ್ತರಿಸಿದ ಮರದ ಕೊಂಬೆಗಳು ಹಾಗೂ ಎಲೆಗಳ ಒಟ್ಟು ತ್ಯಾಜ್ಯಗಳು) ಮುಂತಾದವುಗಳು.

4) "ಬೃಹತ್ ತ್ಯಾಜ್ಯ" ಅಂದರೆ, ವಾಣಿಜ್ಯ ಮತ್ತು ವಸತಿ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯದ ಆಕಾರ, ಗಾತ್ರ ಮತ್ತು ಪ್ರಮಾಣದ ಕಾರಣದಿಂದಾಗಿ ನಗರ ಸ್ಥಳೀಯ ಸಂಸ್ಥೆಯ ಅಭಿಪ್ರಾಯದಲ್ಲಿ ಮತ್ತು / ಅಥವಾ ನಗರ ಸ್ಥಳೀಯ ಸಂಸ್ಥೆಯು ಒದಗಿಸುವ ಪ್ರಾಥಮಿಕ ತ್ಯಾಜ್ಯ ಸಂಗ್ರಹಣೆಯೊಂದಿಗೆ ಸಂಗ್ರಹಣೆ ಮಾಡಲು ಅನಾನುಕೂಲವೆಂದು ಪರಿಗಣಿಸಲಾದ ತ್ಯಾಜ್ಯವಾಗಿರುತ್ತದೆ. ಉದಾಹರಣೆ : ಹಳೆ ಹಾಸಿಗೆಗಳು, ಹಳೆ ಪೀಠೋಪಕರಣಗಳು ಹಾಗೂ ಇನ್ನಿತರೆ ಬೃಹತ್ ತ್ಯಾಜ್ಯ.

5) "ಸಿ ಮತ್ತು ಡಿ ನಿಯಮಗಳು" ಅಂದರೆ, ಕಟ್ಟಡ ನಿರ್ಮಾಣ ಮತ್ತು ಕೆಡವುವಿಕೆ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಮತ್ತು ಈ ನಿಯಮಗಳನ್ವಯ ನಗರ ಸ್ಥಳೀಯ ಸಂಸ್ಥೆ ಮತ್ತು / ಅಥವಾ ಸಮುಚಿತ ಸರ್ಕಾರದ ಪ್ರಾಧಿಕಾರದಿಂದ ಹೊರಡಿಸಲಾದ ಅಧಿಸೂಚನೆಗಳು, ಆದೇಶಗಳು ಮತ್ತು ನಿರ್ದೇಶನಗಳನ್ನು ಒಳಗೊಳ್ಳುತ್ತದೆ.

6) "ಕಟ್ಟುವಿಕೆ ಹಾಗೂ ಕೆಡವುವಿಕೆ ತ್ಯಾಜ್ಯ/ಸಿ ಅಂಡ್ ಡಿ ತ್ಯಾಜ್ಯ" ಅಂದರೆ, ಕಟ್ಟಡ ನಿರ್ಮಾಣ ಮತ್ತು ಕೆಡವುವಿಕೆ ತ್ಯಾಜ್ಯ ನಿರ್ವಹಣಾ ನಿಯಮಗಳು, 2016ರ 3(1)(ಸಿ) ನಿಯಮದಲ್ಲಿ ನಿರ್ದಿಷ್ಟ ಪಡಿಸಲಾದ ಅರ್ಥವನ್ನೇ ಒಳಗೊಂಡಿರುತ್ತದೆ.

7) "ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ/ ವಸ್ತುಗಳ ಪುನರ್ ಪಡೆಯುವಿಕೆ ಸೌಲಭ್ಯ" ಅಂದರೆ, ಜೈವಿಕವಾಗಿ ಮರುಬಳಕೆ ಮಾಡಬಹುದಾದ ಮತ್ತು ಮರುಬಳಕೆ ಮಾಡಲಾಗದ ತ್ಯಾಜ್ಯವನ್ನು ವಿಕೇಂದ್ರಿಕೃತವಾಗಿ ಸಂಗ್ರಹಿಸಲು, ಬೇರ್ಪಡಿಸಲು ಮತ್ತು ನಿರ್ವಹಿಸಲು ಅಭಿವೃದ್ಧಿ ಪಡಿಸಲಾದ ತ್ಯಾಜ್ಯ ನಿರ್ವಹಣಾ ಸೌಲಭ್ಯ

8) "ಇ-ತ್ಯಾಜ್ಯ" ಅಂದರೆ, ಇ-ತ್ಯಾಜ್ಯ (ನಿರ್ವಹಣಾ) ನಿಯಮಗಳು, 2016 ರ ನಿಯಮ 3(1)(ಆರ್) ರಲ್ಲಿ ಸೂಚಿಸಿರುವ ಅದೇ ಅರ್ಥವನ್ನು ಹೊಂದಿರತಕ್ಕದ್ದು.

9) "ಕೆಎಸ್‌ಪಿಸಿಬಿ" ಅಂದರೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ.

10) "ಪೌರಕಾರ್ಮಿಕ" ಅಂದರೆ, ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976 ರ (1977 ರ ಕರ್ನಾಟಕ ಅಧಿನಿಯಮ 14), ಪ್ರಕರಣ (27) ರಲ್ಲಿ ನೀಡಲಾದ ಅರ್ಥವನ್ನೇ ಹೊಂದಿರುತ್ತದೆ.

11) "ಸಾರ್ವಜನಿಕ ಉಪದ್ರವ" ಅಂದರೆ, ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ದೃಷ್ಟಿ, ವಾಸನೆ, ಆಲಿಕೆ ಅಥವಾ ಚಾಲನೆಗೆ ತೊಂದರೆಯನ್ನು ಅಥವಾ ಕೆಲಸ ಅಥವಾ ವಿಶ್ರಾಂತಿಗೆ ಘಾಸಿಯುಂಟು ಮಾಡುವ ಅಥವಾ ಘಾಸಿಯುಂಟು ಮಾಡಬಹುದಾದ ಮತ್ತು ತನ್ಮೂಲಕ ಆರೋಗ್ಯಕ್ಕೆ ಅಪಾಯಕಾರಿಯಾಗಲು ಅಥವಾ ಆಸ್ತಿಗೆ ಅಪಾಯವನ್ನೊಡ್ಡುವಂತಹ ಯಾವುದೇ ಕ್ರಿಯೆ, ಲೋಪ, ಅಪರಾಧ ಅಥವಾ ತಪ್ಪು ಮಾಡುವಿಕೆ.

12) "ಸಾರ್ವಜನಿಕ ರಸ್ತೆ" ಅಂದರೆ, ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರ ಪ್ರಕರಣ 2, ಉಪ-ಪ್ರಕರಣ (24) ನಲ್ಲಿ ನೀಡಲಾದ ಅರ್ಥವನ್ನೇ ಹೊಂದಿರುತ್ತದೆ.

13) "ಆವರಣಗಳು" ಅಂದರೆ, ವಾಸಕ್ಕೆ, ವ್ಯಾಪಾರ, ಸೇವೆಗಳು, ಕೈಗಾರಿಕೆಗಳು, ವ್ಯವಹಾರ, ಸರ್ಕಾರಿ ಅಥವಾ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಉದ್ದೇಶಗಳು ಅಂದರೆ ಮದುವೆಗಳು, ಔತಣ ಕೂಟಗಳು, ಸಭೆಗಳು, ವಸ್ತು ಪ್ರದರ್ಶನ ಸಂಬಂಧಿತ ಕಾರ್ಯಕ್ರಮಗಳು ಇತ್ಯಾದಿಗಳಿಗಾಗಿ ಬಳಸುವ ಯಾವುದೇ ಭೂಮಿ, ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಇದರಲ್ಲಿ ಕಟ್ಟಡ ಅಥವಾ ಅದರ ಭಾಗಕ್ಕೆ ಹೊಂದಿಕೊಂಡಂತಿರುವ ಉದ್ಯಾನವನ ಅಥವಾ ಮೈದಾನ ಮತ್ತು ಸದರಿ ಭೂಮಿಯ ಮೇಲೆ ನಿರ್ಮಾಣವಾಗಿರುವ ಕಟ್ಟಡಗಳನ್ನೂ ಒಳಗೊಂಡ ಆವರಣವಾಗಿರುತ್ತದೆ. ಇದಲ್ಲದೆ, ನಗರ ಸ್ಥಳೀಯ ಸಂಸ್ಥೆಯು ವಾಹನಗಳ ಚಾಲನೆಯನ್ನು ಹೊರತು ಪಡಿಸಿ, ವಾಹನಗಳ ನಿಲುಗಡೆ, ಬೀದಿ ವ್ಯಾಪಾರ, ನಿರ್ಮಾಣ ಸ್ಥಳಗಳಲ್ಲಿ ಸಾಮಾಗ್ರಿ ಸಂಗ್ರಹಣೆ ಅಥವಾ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಉದ್ದೇಶಗಳಿಗಾಗಿ ತಾತ್ಕಾಲಿಕವಾಗಿ ಅನುಮತಿಸಲಾದ ಸಾರ್ವಜನಿಕ ರಸ್ತೆಯ ಯಾವುದೇ ಭಾಗವನ್ನು ಒಳಗೊಂಡಿರುತ್ತದೆ.

14) "ಜೈವಿಕವಾಗಿ ಕೊಳೆಯಲಾರದ ಮರುಬಳಕೆ ಮಾಡಬಹುದಾದ ತ್ಯಾಜ್ಯಗಳು" ಅಂದರೆ, ಯಾವುದೇ ಒಂದು ಪ್ರಕ್ರಿಯೆಯ ಮೂಲಕ ಹೊಸ ಉತ್ಪನ್ನಗಳನ್ನು ಉತ್ಪಾದಿಸಬಹುದಾದ ಕಚ್ಚಾವಸ್ತುವಾಗಿ ರೂಪಾಂತರಿಸಬಹುದಾದ, ಆದರೆ ಮೂಲ ಉತ್ಪನ್ನಗಳ ಮಾದರಿಯಲ್ಲಿಯೇ ಇರಬಹುದಾದ ಅಥವಾ ಇಲ್ಲದಿರಬಹುದಾದ ಜೈವಿಕವಾಗಿ ಕೊಳೆಯಲಾರದ ತ್ಯಾಜ್ಯಗಳು.

15) "ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು" ಅಂದರೆ, ಯಾವುದೇ ಒಂದು ನಿರ್ದಿಷ್ಟ ನೆರೆಹೊರೆಯಲ್ಲಿ ಅಥವಾ ಪ್ರದೇಶದಲ್ಲಿ ವಾಸಿಸುತ್ತಿರುವ ಸಹಕಾರ ಸಂಘಗಳ ನಿಬಂಧಕರು

ನೋಂದಾಯಿಸಿರಬಹುದಾದ ಅಥವಾ ನೋಂದಾಯಿಸದಿರಬಹುದಾದ ವಸತಿ ಆವರಣದ ಅನುಭೋಗದಾರರು ಅಥವಾ ಗುಂಪು ಅಥವಾ ಮಾಲೀಕರ ಸಂಘಗಳು ಎಂದರ್ಥ.

16) "ನೈರ್ಮಲ್ಯ ತ್ಯಾಜ್ಯ/ಸ್ಯಾನಿಟರಿ ತ್ಯಾಜ್ಯ" ಅಂದರೆ, ಬಳಕೆ ಮಾಡಲಾದ ಡೈಪರ್‌ಗಳು, ಸ್ಯಾನಿಟರಿ ಟವಲುಗಳು ಅಥವಾ ನ್ಯಾಪ್‌ಕಿನ್ನುಗಳು, ಋತುಸಾವದ ಬಟ್ಟೆಗಳು, ಸ್ರಾವವನ್ನು ಹೀರುವಂತಹ ಬಟ್ಟೆಯ ತುಂಡು, ಗರ್ಭನಿರೋಧಕ ಚೀಲಗಳು, ಕಿವಿಯ ಕಸ ತೆಗೆಯುವ ಕಡ್ಡಿಗಳು, ಶೌಚಾಲಯದಲ್ಲಿ ಬಳಸುವಂತಹ ಕಾಗದಗಳು, ಬ್ಯಾಂಡ್ ಏಯ್ಡ್‌ಗಳು, ಗಾಯದ ಬಟ್ಟೆಗಳು, ಗೃಹ ಬಳಕೆಯ ಸಿರಿಂಜುಗಳು ಮತ್ತು ಇತರ ಅದೇ ಮಾದರಿಯ ನಿರುಪಯುಕ್ತ ವಸ್ತುಗಳನ್ನು ಒಳಗೊಂಡಿರುವ ತ್ಯಾಜ್ಯಗಳು ಎಂದರ್ಥ.

17) "ಬೀದಿ ಕಸ ಗುಡಿಸುವುದು" ಅಂದರೆ ಸಾರ್ವಜನಿಕ ರಸ್ತೆಗಳು, ಪಾರ್ಕ್‌ಗಳು ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿನ ಘನತ್ಯಾಜ್ಯ ವಸ್ತುಗಳನ್ನು ಗುಡಿಸುವುದು ಮತ್ತು ಸಾರ್ವಜನಿಕ ರಸ್ತೆಗಳಿಗೆ ಹೊಂದಿಕೊಂಡ ಚರಂಡಿಗಳ ಮೇಲ್ಭಾಗ / ಕಂದಕಗಳನ್ನು (ಒಂದು ಮೀಟರ್ ಗಿಂತ ಕಡಿಮೆ ಅಗಲದ) ಸ್ವಚ್ಛಗೊಳಿಸುವುದು ಹಾಗೂ ಇತರ ಸಂಬಂಧಿತ ಚಟುವಟಿಕೆಗಳು ಎಂದರ್ಥ.

18) "ಘನ ತ್ಯಾಜ್ಯ ನಿರ್ವಹಣಾ ನಿಯಮಗಳು" ಅಂದರೆ ಭಾರತ ಸರ್ಕಾರವು ಪರಿಸರ (ಸಂರಕ್ಷಣೆ) ಅಧಿನಿಯಮ, 1986 ರ ಅಡಿಯಲ್ಲಿ ಹೊರಡಿಸಿರುವ ಘನತ್ಯಾಜ್ಯ ನಿರ್ವಹಣಾ ನಿಯಮಗಳು, 2016 ಎಂದರ್ಥ.

19) "ಘನತ್ಯಾಜ್ಯ ನಿರ್ವಹಣಾ ಸೇವಾ ಶುಲ್ಕಗಳು" ಅಂದರೆ, ಈ ಉಪ-ವಿಧಿಗಳ ಅನುಸಾರವಾಗಿ ನಗರ ಸ್ಥಳೀಯ ಸಂಸ್ಥೆ ಮತ್ತು / ಅಥವಾ ಏಜೆನ್ಸಿಗೆ / ಸೇವಾದಾತರಿಗೆ ಘನತ್ಯಾಜ್ಯ, ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿ ಪ್ರಕ್ರಿಯೆ ಮಾಡುವ ಸಲುವಾಗಿ ತಗಲುವ ವೆಚ್ಚವನ್ನು ಪೂರ್ಣವಾಗಿ ಅಥವಾ ಭಾಗಶ: ಭರಿಸುವ ಸಲುವಾಗಿ ನಗರ ಸ್ಥಳೀಯ ಸಂಸ್ಥೆಯು ತ್ಯಾಜ್ಯೋತ್ಪಾದಕನ ಮೇಲೆ ವಿಧಿಸುವ ಶುಲ್ಕ ಎಂದರ್ಥ.

20) "ನಗರ ಸ್ಥಳೀಯ ಸಂಸ್ಥೆ/ಯು.ಎಲ್.ಬಿ" ಅಂದರೆ, ಕರ್ನಾಟಕ ಪುರಸಬೆಗಳ ಅಧಿನಿಯಮ, 1964 (1964 ರ, ಕರ್ನಾಟಕ ಅಧಿ ನಿಯಮ, 22) ರ ರನ್ವಯ ಸ್ಥಾಪಿಸಲಾದ ನಗರ/ಪಟ್ಟಣ ಎಂದರ್ಥ.

21) "ತ್ಯಾಜ್ಯ ವರ್ತಕರು" ಅಂದರೆ, ಕೊಳೆಯದಿರುವ ಮರುಬಳಕೆ ಮಾಡಬಹುದಾದ ಜೈವಿಕ ತ್ಯಾಜ್ಯದ ಬೇರ್ಪಡಿಸುವಿಕೆ, ಮಾರಾಟ ಮತ್ತು ಖರೀದಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಸ್ಕ್ರ್ಯಾಪ್ ಡೀಲರ್‌ಗಳು, ಸಂಚಾರಿ ಖರೀದಿದಾರರು ಮತ್ತು ವರ್ತಕರಂಥ ವ್ಯಕ್ತಿಗಳು ಅಥವಾ ಉಪನಿಯಮಗಳು ಎಂದರ್ಥ.

22) "ಜಾಹೀರಾತು" ಯಾವುದೇ ಭೂಮಿ, ಕಟ್ಟಡ, ಗೋಡೆ, ಪ್ರಕಟಣ ಪಟ, ಚೌಕಟ್ಟು, ಕಂಬ ಅಥವಾ ರಚನೆಯ ಮೇಲೆ ಅಥವಾ ಅದರ ಮೇಲ್ಭಾಗದಲ್ಲಿ ಅಥವಾ ಯಾವುದೇ ವಾಹನದ ಮೇಲೆ ಅಥವಾ ಅದರಲ್ಲಿ ನಿಲ್ಲಿಸಿದ, ಪ್ರದರ್ಶಿಸಿದ, ಜೋಡಿಸಿದ ಅಥವಾ ಉಳಿಸಿಕೊಂಡ ಅಥವಾ ಸಾರ್ವಜನಿಕ ಬೀದಿ ಅಥವಾ ಸಾರ್ವಜನಿಕ ಸ್ಥಳದಿಂದ ಯಾವುದೇ ರೀತಿಯಲ್ಲಾಗಲೀ, ಸಾರ್ವಜನಿಕ ದೃಷ್ಟಿಗೆ ಪ್ರದರ್ಶಿಸಿದ ಚಲನ ಚಿತ್ರ ಸಾಧನಗಳ ಮೂಲಕ ಪ್ರದರ್ಶಿಸಿದ ಯಾವುದೇ ಜಾಹೀರಾತನ್ನು ಒಳಗೊಂಡ ಜಾಹೀರಾತುಗಳು

23) "ಅಭಿವೃದ್ಧಿ ಶುಲ್ಕ" ಅಭಿವೃದ್ಧಿ ಶುಲ್ಕ ಎಂದರೆ ಒಂದು ಪ್ರದೇಶದ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು, ಒಳ ಚರಂಡಿ, ಉದ್ಯಾನವನ ಇತ್ಯಾದಿಗಳ ನಿರ್ಮಾಣ ಮತ್ತು ಸುಧಾರಣೆಗಾಗಿ ಸ್ಥಳೀಯ ಸಂಸ್ಥೆಗಳು ವಿಧಿಸುವ ಶುಲ್ಕವಾಗಿದೆ. ಇದನ್ನು ಆಸ್ತಿ ಮಾಲೀಕರು ಆಸ್ತಿಯ ಮೌಲ್ಯವರ್ಧನೆಗೆ ಕೊಡುಗೆ ನೀಡುವ ಸೇವೆಗಳಿಗೆ ಪಾವತಿಸುವ ಶುಲ್ಕವಾಗಿದೆ.

24) "ನವೀಕರಣ ಶುಲ್ಕ" ಅಂದರೆ ಯಾವುದೇ ಪರವಾನಿಗೆ / ಲೈಸೆನ್ಸ್ ನಿಗದಿತ ಅವಧಿಗೆ ನೀಡಲಾಗಿರುತ್ತದೆ. ಅದನ್ನು ಅವಧಿ ಮುಗಿದ ನಂತರ ನವೀಕರಣಗೊಳಿಸಲು ವಿಧಿಸುವ ಶುಲ್ಕವಾಗಿದೆ.

25) "ಕಟ್ಟಡ ಮಾರ್ಪಾಡಿಸುವಿಕೆ ಅಥವಾ ವಿಸ್ತರಣೆ" ಅಂದರೆ ಕಟ್ಟಡಕ್ಕೆ ಸೇರ್ಪಡೆ ಅಥವಾ ಕಟ್ಟಡದ ಎತ್ತರದ ಬದಲಾವಣೆ ಅಥವಾ ಕಟ್ಟಡದ ಭಾಗವನ್ನು ತೆಗೆದು ಹಾಕುವುದು, ಅಥವಾ ರಚನೆಗೆ ಯಾವುದೇ ಬದಲಾವಣೆ, ಉದಾಹರಣೆಗೆ ಯಾವುದೇ ಗೋಡೆ ಅಥವಾ ಗೋಡೆಯ ಭಾಗ, ವಿಭಜನೆ, ಕಂಬ, ಕಿರಣ, ಜೋಯಿಸ್ಟ್, ಮೆಜ್ಜನೈನ್ ನೆಲ ಅಥವಾ ಇತರ ಆಧಾರವನ್ನು ಒಳಗೊಂಡಂತೆ ನೆಲವನ್ನು ನಿರ್ಮಿಸುವುದು ಅಥವಾ ತೆಗೆದು ಹಾಕುವುದು ಅಥವಾ ಕತ್ತರಿಸುವುದು, ಅಥವಾ ಪ್ರವೇಶ ಅಥವಾ ನಿರ್ಗಮನಕ್ಕೆ ಅಗತ್ಯವಿರುವ ಯಾವುದೇ ಮಾರ್ಗಗಳ ಬದಲಾವಣೆ ಅಥವಾ ಮುಚ್ಚುವಿಕೆ ಅಥವಾ ಕಾನೂನುಗಳಲ್ಲಿ ಒದಗಿಸಲಾದ ಫಿಕ್ಚರ್‌ಗಳು ಅಥವಾ ಸಲಕರಣೆಗಳ ಬದಲಾವಣೆ.

26) "ಸ್ವಾಧೀನ ಪ್ರಮಾಣ ಪತ್ರ" ಸ್ವಾಧೀನ ಪ್ರಮಾಣ ಪತ್ರ ಎಂದರೆ ಒಂದು ನಿರ್ಮಾಣವಾಗಿರುವ ಕಟ್ಟಡವು ಸುರಕ್ಷಿತವಾಗಿದೆ ಮತ್ತು ಸ್ಥಳೀಯ ನಿಯಮಗಳ ಪ್ರಕಾರ ನಿರ್ಮಿಸಲ್ಪಟ್ಟಿದೆ ಎಂದು ಸರ್ಕಾರವು ನೀಡುವ ಕಾನೂನುಬದ್ಧ ದಾಖಲೆಯಾಗಿದೆ, ವಾಸಕ್ಕೆ ಸಿದ್ಧವಾಗಿದೆ ಎಂದು ಇದು ದೃಢ ಪಡಿಸುತ್ತದೆ.

27) "LBD (Licensed Building Designer) ಲೈಸೆನ್ಸ್" ಸರ್ಕಾರವು ಸೂಚಿಸಿದ ಅರ್ಹತೆ ಮತ್ತು ಸಾಮರ್ಥ್ಯದ ಪ್ರಕಾರ ನಗರ ಸ್ಥಳೀಯ ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ವೃತ್ತಿಪರರು

ಕಟ್ಟಡ ನಿರ್ಮಾಣದಲ್ಲಿ ವೃತ್ತಿಪರ ಸೇವೆಗಳನ್ನು ಒದಗಿಸಲು ಪರವಾನಗಿಯನ್ನು ಹೊಂದಿರುತ್ತಾರೆ. ಪರವಾನಗಿ ಪಡೆದ ವೃತ್ತಿಪರರು ಮಾತ್ರ ದಾಖಲೆಯಲ್ಲಿ ವೃತ್ತಿಪರರಾಗಲು ಅನುಮತಿಸಲ್ಪಡುತ್ತಾರೆ.

28) "ರಸ್ತೆ ಅಗೆತದ ಶುಲ್ಕ" ಯಾವುದೇ ಸೇವಾದಾರರು ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಈಗಾಗಲೇ ನಿರ್ಮಾಣವಾಗಿರುವ ರಸ್ತೆಯ (ಮಣ್ಣಿನ ರಸ್ತೆ / ಕಾಂಕ್ರೀಟ್ ರಸ್ತೆ / ಡಾಂಬರು ರಸ್ತೆ) ಕೆಳಗಡೆ ಕುಡಿಯುವ ನೀರಿನ ಕೊಳವೆ, ವಿದ್ಯುತ್ ಜೋಡಣೆ ಮಾರ್ಗ, ಕೇಬಲ್ ಅಳವಡಿಸುವುದು ಹಾಗೂ ಇತರೆ ಸೇವೆ / ಸೌಲಭ್ಯಗಳನ್ನು ಒದಗಿಸಲು ರಸ್ತೆಯನ್ನು ಅಗೆಯುವಾಗ ನಗರ ಸ್ಥಳೀಯ ಸಂಸ್ಥೆಯು ನಿರ್ದಿಷ್ಟ ಪಡಿಸಿದ ಶುಲ್ಕ.

29) "ಪ್ಲಂಬಿಂಗ್ ಲೈಸೆನ್ಸ್" ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಂಪರ್ಕ ನೀಡಲು ನಗರ ಸ್ಥಳೀಯ ಸಂಸ್ಥೆಯಿಂದ ನೋಂದಣಿಯಾದ ಅಧಿಕೃತ ಪ್ಲಂಬರ್‌ಗೆ ನೀಡಲಾಗುವ ಲೈಸೆನ್ಸ್.

30) "ಸಕ್ಕಿಂಗ್ ಯಂತ್ರ" ಎಂದರೆ ಒಳಚರಂಡಿ ಮತ್ತು ಮ್ಯಾನ್‌ಹೋಲ್‌ಗಳನ್ನು ಸ್ವಚ್ಛಗೊಳಿಸಲು ಬಳಸುವ ಅತ್ಯಂತ ಸಾಮಾನ್ಯವಾದ ಟ್ರಕ್ ಮೌಂಟೆಡ್ ಯಂತ್ರವಾಗಿದೆ. ಇದು ಕೊಳಕು ನೀರು ಮತ್ತು ಹೂಳನ್ನು ಹೀರಿಕೊಳ್ಳುತ್ತದೆ ಮತ್ತು ಅದೇ ಸಮಯದಲ್ಲಿ ಹೆಚ್ಚಿನ ಒತ್ತಡದ ನೀರಿನಿಂದ ಕೊಳವೆಗಳನ್ನು ಸ್ವಚ್ಛಗೊಳಿಸುತ್ತದೆ.

31) "ಸ್ವಚ್ಛತಾ ಠೇವಣಿ" ಸಾರ್ವಜನಿಕ ಸಭೆಗಳು ಮತ್ತು ಸಮಾರಂಭಗಳ ಆಯೋಜಕರು ಸದರಿ ಕಾರ್ಯಕ್ರಮದ ಅವಧಿಗಾಗಿ ಸಂಬಂಧಪಟ್ಟ ಕಛೇರಿಯಲ್ಲಿ ಅಗತ್ಯ ಮುಂಗಡವನ್ನು ಠೇವಣಿ ಇರಿಸತಕ್ಕದ್ದು ಮತ್ತು ಅಂತಹ ಸಾರ್ವಜನಿಕ ಸಮಾರಂಭವು ಮುಕ್ತಾಯವಾದ ನಂತರ ಅಂತಹ ಸಾರ್ವಜನಿಕ ಸ್ಥಳದ ಸ್ವಚ್ಛತೆಯನ್ನು ಮರು ಸ್ಥಾಪಿಸಲಾಗಿದೆಯೆಂದು ಘೋಷಿಸಿದ ತರುವಾಯ ಮತ್ತು ಸಭೆಗಳು ಮತ್ತು ಸಮಾರಂಭಗಳ ಕಾರಣದಿಂದಾಗಿ
ಉತ್ಪತ್ತಿಯಾದಂತಹ ಘನತ್ಯಾಜ್ಯವನ್ನು ಈ ಉಪವಿಧಿಗಳ ಉಪಬಂಧಗಳಡಿಯಲ್ಲಿ ಬೇರ್ಪಡಿಸಿ, ಸಂಗ್ರಹಿಸಿ ಮತ್ತು ನಿಗದಿತ ಸ್ಥಳಕ್ಕೆ ಸಾಗಣೆ ಮಾಡಿದುದು ಸಂಬಂಧಪಟ್ಟ ಅಧಿಕಾರಿ / ಪ್ರಾಧಿಕಾರಕ್ಕೆ ಮನವರಿಕೆಯಾದ ತರುವಾಯ ಅಂತಹ ಮುಂಗಡ ಠೇವಣಿಯು ಮರು ಪಾವತಿಸಲ್ಪಡತಕ್ಕದ್ದು. ಅಂತಹ ಸಮಾರಂಭವು ಮುಕ್ತಾಯವಾದ 24 ಗಂಟೆಯ ಅವಧಿಯೊಳಗೆ ಅಂತಹ ಸಾರ್ವಜನಿಕ ಸ್ಥಳದ ಸ್ವಚ್ಛತೆಯನ್ನು ಮರು ಸ್ಥಾಪಿಸುವ ಸಂದರ್ಭದಲ್ಲಿ, ನಗರ ಸ್ಥಳೀಯ ಸಂಸ್ಥೆಗೆ ಸಂದಾಯ ಮಾಡಿದಂತಹ ಸ್ವಚ್ಛತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ಆ ಮೊತ್ತವನ್ನು ಆಯೋಜಕನು ಕ್ಲೇಮು ಮಾಡತಕ್ಕದ್ದಲ್ಲ.

32) "ಒಣ ತ್ಯಾಜ್ಯ (Dry Waste" ಒಣತ್ಯಾಜ್ಯ ಅಂದರೆ ಜೈವಿಕವಾಗಿ ಕರಗಿಸಬಹುದಾದ ತ್ಯಾಜ್ಯ ಮತ್ತು ಬೀದಿ ಜಡ ಕಸಗಳ ಹೊರತಾದ ತ್ಯಾಜ್ಯಗಳಾಗಿರುವುದು ಮತ್ತು ಮರುಬಳಸಬಹುದಾದ ಮತ್ತು ಮರುಬಳಸಲಾಗದ ತ್ಯಾಜ್ಯ, ದಹಿಸಬಹುದಾದ ತ್ಯಾಜ್ಯ ಮತ್ತು ಸ್ಯಾನಿಟರಿ ನ್ಯಾಪ್‌ಕಿನ್ ಮತ್ತು ಡೈಪರ್ಸ್ ಮುಂತಾದವುಗಳಾಗಿರುವುದು.

33) "ಹಸಿ ತ್ಯಾಜ್ಯ (Wet Waste)" ಹಸಿ ತ್ಯಾಜ್ಯ ಅಂದರೆ ಭೂಮಿಯಲ್ಲಿ ಅಥವಾ ಪ್ರಕೃತಿಯಲ್ಲಿ ಸುಲಭವಾಗಿ ವಿಘಟನೆಯಾಗುವ / ಕೊಳೆಯುವ ತ್ಯಾಜ್ಯವೇ ಹಸಿ ತ್ಯಾಜ್ಯ.

34) "ಮಿಶ್ರ ತ್ಯಾಜ್ಯ" ಒಣ ತ್ಯಾಜ್ಯ ಮತ್ತು ಹಸಿ ತ್ಯಾಜ್ಯ ಮಿಶ್ರಿತವಾಗಿರುವ ತ್ಯಾಜ್ಯ.

35) "ಮಲ ತ್ಯಾಜ್ಯ" ಮಾನವನ ದೇಹದಿಂದ ಹೊರ ಬರುವ ಮಲವನ್ನು ಮಲ ತ್ಯಾಜ್ಯ ಎನ್ನುತ್ತಾರೆ

36) "ಘನ ತ್ಯಾಜ್ಯ (Solid Waste)"ಅಂದರೆ ಸ್ಥಳೀಯ ಸಂಸ್ಥೆಯ ಪ್ರದೇಶದಲ್ಲಿ ಉತ್ಪತ್ತಿಯಾಗಿರುವ ಘನ ಅಥವಾ ಅರೆ-ಘನತ್ಯಾಜ್ಯ, ನೈರ್ಮಲ್ಯ ತ್ಯಾಜ್ಯ, ವಾಣಿಜ್ಯ ತ್ಯಾಜ್ಯ, ಸಾಂಸ್ಥಿಕ ತ್ಯಾಜ್ಯ, ಆಹಾರ ಉಪಚಾರಕ ಮತ್ತು ಮಾರುಕಟ್ಟೆ ತ್ಯಾಜ್ಯ,ಮತ್ತು ಇತರ ವಾಸೇತರ ತ್ಯಾಜ್ಯ, ಬೀದಿ ಕಸಗಳು, ನೆಲ ಚರಂಡಿಯಿಂದ ತೆಗೆದ ಅಥವಾ ಸಂಗ್ರಹಿಸಿದ ಹೋಳು, ತೋಟಗಾರಿಕಾ ತ್ಯಾಜ್ಯ, ಕೃಷಿ ಮತ್ತು ಹೈನು ತ್ಯಾಜ್ಯ, ಕೈಗಾರಿಕಾ ತ್ಯಾಜ್ಯ ಹೊರತುಪಡಿಸಿ ಜೈವಿಕ ಔಷಧಿ ತ್ಯಾಜ್ಯ, ಜೈವಿಕ ಔಷಧಿ, ತ್ಯಾಜ್ಯ, ಮತ್ತು ಇ- ತ್ಯಾಜ್ಯ, ಬ್ಯಾಟರಿ ತ್ಯಾಜ್ಯ, ವಿಕಿರಣ ತ್ಯಾಜ್ಯಗಳು ಸೇರಿರುವುದು.

37) "ದಂಡನೆಗಳು" (1) ಯಾರೇ ವ್ಯಕ್ತಿಯು ಘನತ್ಯಾಜ್ಯ ನಿರ್ವಹಣಾ ನಿಯಗಳು ಮತ್ತು / ಅಥವಾ ಈ ಉಪವಿಧಿಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಪಾಲನೆ ಮಾಡಲು ವಿಫಲನಾದಲ್ಲಿ ಅಂತಹ ಅಪರಾಧಕ್ಕಾಗಿ ಸ್ಥಳೀಯ ಸಂಸ್ಥೆ ನಿರ್ದಿಷ್ಟ ಪಡಿಸಿರುವ ಜುಲ್ಮಾನೆಯ ದಂಡನೆಗೆ ಗುರಿಯಾಗತಕ್ಕದ್ದು. ಒಂದು ವೇಳೆ ಎರಡನೆಯ ಬಾರಿ ಉಲ್ಲಂಘಿಸಿದಲ್ಲಿ ಅಥವಾ ಪಾಲನೆ ಮಾಡದಿದ್ದಲ್ಲಿ, ಅಂತಹ ಅಪರಾಧಕ್ಕಾಗಿ ಸ್ಥಳೀಯ ಸಂಸ್ಥೆ ನಿರ್ದಿಷ್ಟ ಪಡಿಸಿರುವಂತಹ ದಂಡದ ದುಪ್ಪಟ್ಟು ಮೊತ್ತದವರೆಗೆ ದಂಡವನ್ನು ವಿಧಿಸುವ ಅಧಿಕಾರವನ್ನು ನಗರ ಸ್ಥಳೀಯ ಸಂಸ್ಥೆಯು ಹೊಂದಿರುತ್ತದೆ. ಒಂದು ವೇಳೆ, ಮೂರನೆಯ ಬಾರಿಯೂ ಉಲ್ಲಂಘಿಸಿದಲ್ಲಿ ಅಥವಾ ಪಾಲನೆ ಮಾಡದಿದ್ದಲ್ಲಿ, ಅಂತಹ ಅಪರಾಧಕ್ಕಾಗಿ ಸ್ಥಳೀಯ ಸಂಸ್ಥೆ ನಿರ್ದಿಷ್ಟ ಪಡಿಸಿರುವಂತಹ ದಂಡದ ಮೂರು ಪಟ್ಟು ಮೊತ್ತದವರೆಗೆ ದಂಡವನ್ನು ವಿಧಿಸುವ ಅಧಿಕಾರವನ್ನು ನಗರ ಸ್ಥಳೀಯ ಸಂಸ್ಥೆಯು ಹೊಂದಿರತಕ್ಕದ್ದು. ಆ ತರುವಾಯ, ನಾಲ್ಕನೆಯ ಬಾರಿಗೆ ಉಲ್ಲಂಘನೆಯಾದಲ್ಲಿ, ನಗರ ಸ್ಥಳೀಯ ಸಂಸ್ಥೆಯು ವ್ಯಾಪಾರದ ಪರವಾನಗಿ ರದ್ದುಗೊಳಿಸಲು, ಕರ್ನಾಟಕ ಮಹಾನಗರಪಾಲಿಕೆ ಅಧಿನಿಯಮ 1976 ಮತ್ತು ಸಂದರ್ಭಾನುಸಾರ ಕರ್ನಾಟಕ ಪೌರ ಸಭೆಯ

ಅಧಿನಿಯಮ, 1964 ರಲ್ಲಿ ನಿರ್ದಿಷ್ಟ ಪಡಿಸಿರುವ ವಿವಿಧ ವಿಧಾನಗಳ ಅನುಸಾರ ದಂಡದ ಮೊತ್ತಗಳನ್ನು ವಸೂಲಿ ಮಾಡಲು ಮತ್ತು / ಅಥವಾ ಕಾಲ ಕಾಲಕ್ಕೆ ಅಧಿಸೂಚಿಸಬಹುದಾದಂತಹ ಇತರ ಯಾವುದೇ ಯುಕ್ತ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಧಿಕಾರ ಹೊಂದಿರತಕ್ಕದ್ದು.

38) "On Site Composting" ಬೃಹತ್ ತ್ಯಾಜ್ಯೋತ್ಪಾದಕರು / ಅಪಾರ್ಟ್ ಮೆಂಟ್ ಅಥವಾ ದೊಡ್ಡ ಸಂಸ್ಥೆಗಳಲ್ಲಿ ತಮ್ಮಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಸ್ಥಳದಲ್ಲಿಯೇ ಸ್ವಂತ ತ್ಯಾಜ್ಯ ಸಂಸ್ಕರಣೆ ಕಾಂಪೋಸ್ಟಿಂಗ್ ಘಟಕ ಮೂಲಕ ಸಂಸ್ಕರಣೆ ಮಾಡುವುದನ್ನು On site Composting ಎನ್ನುತ್ತಾರೆ.

39) "ಬೀದಿ ವ್ಯಾಪಾರಿ (Street Vendor)" ಅಂದರೆ ಪದಾರ್ಥಗಳು, ಸರಕುಗಳು, ಜಿನಿಸುಗಳು, ಆಹಾರದ ಐಟಂಗಳು ಅಥವಾ ನಿತ್ಯೋಪಯೋಗಿ ಮಾರಿಕೆ ವಸ್ತುಗಳನ್ನು ಬಿಕರಿ ಮಾಡಲು ಅಥವಾ ತಾತ್ಕಾಲಿಕವಾಗಿ ನಿರ್ಮಿಸಿರುವ ಸೂರಿನಿಂದ ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗುತ್ತಾ ರಸ್ತೆ, ಬೀದಿ, ಒಳದಾರಿ, ಪಾದಾಚಾರಿ ಮಾರ್ಗ, ಕಾಲುದಾರಿ, ಸಾರ್ವಜನಿಕ ಉದ್ಯಾನ ಅಥವಾ ಇತರ ಯಾವುದೇ ಸಾರ್ವಜನಿಕ ಸ್ಥಳ ಅಥವಾ ಖಾಸಗಿ ಪ್ರದೇಶದಲ್ಲಿ ಮತ್ತು ಸಂಚಾರಿ ವ್ಯಾಪಾರ, ತಿರುಗು ವ್ಯಾಪಾರ, ನೆಲೆಕುಂತ ವ್ಯಾಪಾರ ಮತ್ತು ಸ್ಥಳೀಯ ಅಥವಾ ಪ್ರಾದೇಶಿಕ ನಿರ್ದಿಷ್ಟವಾದಂತಹ ಇತರ ಎಲ್ಲಾ ಸಾಮ್ಯ ನುಡಿಗಟ್ಟುಗಳು ಸೇರಿದಂತೆ, ಸೇವೆಗಳನ್ನು ನೀಡುವಲ್ಲಿ ನಿರತನಾಗಿರುವ ಯಾವುದೇ ವ್ಯಕ್ತಿಯಾಗಿರುವನು ಮತ್ತು "ಬೀದಿ ವ್ಯಾಪಾರ" ಪದಗಳನ್ನು ಅವುಗಳ ವ್ಯಾಕರಣ ಏರಿಳಿತ ಹಾಗೂ ಸಜಾತಿ ಧ್ವನಿಯೊಂದಿಗೆ ಅದೇ ಪ್ರಕಾರವಾಗಿ ಅರ್ಥೈಸುವುದು

40) "ಗೃಹಿಕ ಅಪಾಯಕಾರಿ ತ್ಯಾಜ್ಯ (Domestic Hazardous Waste)" ಅಂದರೆ ಮನೆಯ ಸ್ತರದಲ್ಲಿ ಉತ್ಪತ್ತಿಯಾಗುವ ಬೇಡದ ಬಣ್ಣದ ಡಬ್ಬಿಗಳು, ಕೀಟನಾಶಕ ಡಬ್ಬಿಗಳು, ಸಿಎಫ್ಎಲ್ ಬಲ್ಬ್ಗಳು, ಟ್ಯೂಬ್ ಲೈಟ್ಗಳು, ಅವಧಿ ಮೀರಿದ ಔಷಧಗಳು, ಮುರಿದ ಪಾದರಸದ ಥರ್ಮಾಮೀಟರ್ಗಳು, ಬಳಸಿದ ಬ್ಯಾಟರಿಗಳು, ಬಳಸಿದ ಸೂಜಿ ಮತ್ತು ಸಿರಿಂಜ್ಗಳು, ಮತ್ತು ಕಲುಷಿತ ಮಾನಕಗಳು, ಮುಂತಾದವುಗಳಾಗಿರುವುದು.

41) "Debris" ಧೂಳು, ರಸ್ತೆ ಗುಡಿಸುವುದು, ಚರಂಡಿ ಹೂಳು, ಬೂದಿ, ಮುರಿದ ಇಟ್ಟಿಗೆಗಳು, ಗಾರೆ, ಒಡೆದ ಗಾಜು, ನಿರ್ಮಾಣ ಮತ್ತು ಕೆಡಹುವ ತ್ಯಾಜ್ಯ

42) "ಭಸ್ಮೀಕರಣ (Incineration)" ಅಂದರೆ ಅತಿಯಾದ ಉಷ್ಣತೆಯ ಕಾವಿನಲ್ಲಿ ತ್ಯಾಜ್ಯ ವಸ್ತುಗಳನ್ನು ಕರಗಿಸಲು ಘನತ್ಯಾಜ್ಯ ಸುಡುವಿಕೆ ಅಥವಾ ದಹಿಸುವಿಕೆ ಒಳಗೊಂಡಿರುವ ಏರ್ಪಾಟಿತ ಕಾರ್ಯ ವಿಧಾನವಾಗಿರುವುದು.

43) "ಆಸ್ತಿ ತೆರಿಗೆ" ಪೌರ ಸಭಾ ಪ್ರದೇಶದೊಳಗೆ ಇರುವ ಕಟ್ಟಡ ಅಥವಾ ಖಾಲಿ ಭೂಮಿಗಳು ಅಥವಾ ಅವೆರಡರ ಮೇಲಿನ ತೆರಿಗೆ.

44) "ಹಕ್ಕು ಬದಲಾವಣೆ ಶುಲ್ಕ" ಆಸ್ತಿಗಳನ್ನು ಕ್ರಯಕ್ಕೆ ಪಡೆದವರು ಅಥವಾ ಖಾತೆದಾರರು ಮರಣ ಹೊಂದಿದ ಸಂದರ್ಭದಲ್ಲಿ ಅವರ ವಾರಸುದಾರರ ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ವಿಧಿಸಲಾಗುವ ಶುಲ್ಕ.

45) "ನಮೂನೆ 3" ಕರ್ನಾಟಕ ಪೌರ ಸಭೆ ಅಧಿನಿಯಮ 1964, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಮತ್ತು ಇತರೆ ಅನ್ವಯವಾಗುವ ಕಾಯ್ದೆ ಮತ್ತು ನಿಯಮಗಳನ್ನು ಪಾಲಿಸಿದ ಅಧಿಕೃತ ಆಸ್ತಿಗಳ ಆಸ್ತಿ ತೆರಿಗೆಗಳು, ಕರ ಮತ್ತು ದಂಡನೆಗಳು ನಮೂದಿಸಿರುವ ನಮೂನೆಗೆ ನಮೂನೆ 3 ಎಂದು ಕರೆಯುತ್ತಾರೆ.

46) "ನಮೂನೆ 3ಎ" ಕರ್ನಾಟಕ ಪೌರ ಸಭೆ ಅಧಿನಿಯಮ 1964, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಮತ್ತು ಇತರೆ ಅನ್ವಯವಾಗುವ ಯಾವುದೇ ಕಾಯ್ದೆ ಮತ್ತು ನಿಯಮಗಳನ್ನು ಪಾಲಿಸದ ಅನಧಿಕೃತ ಆಸ್ತಿಗಳ ಆಸ್ತಿ ತೆರಿಗೆಗಳು, ಕರ ಮತ್ತು ದಂಡನೆಗಳು ನಮೂದಿಸಿರುವ ನಮೂನೆಗೆ ನಮೂನೆ 3ಎ ಎಂದು ಕರೆಯುತ್ತಾರೆ.

ಈ ಉಪವಿಧಿಗಳಲ್ಲಿ ಬಳಕೆ ಮಾಡಿರುವಂತಹ ಆದರೆ ಪರಿಭಾಷಿಸಲಾರದಂತಹ ಪದಗಳು ಮತ್ತು ಅಭಿವ್ಯಕ್ತಿಗಳು ಘನತ್ಯಾಜ್ಯ ನಿರ್ವಹಣಾ ನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

3. ಕಂದಾಯ ಶಾಖೆಗೆ ಸಂಬಂಧಿಸಿದ ಸೇವಾ ಶುಲ್ಕಗಳು ಮತ್ತು ದಂಡನೆಗಳು

a) ಸೇವೆಗಳು :

ಕ್ರ.ಸಂ.	ವಿವರಗಳು	ಶುಲ್ಕ
1.	ದೃಢ ಪತ್ರ / ನಿರಾಕ್ಷೇಪಣಾ ಪತ್ರ / ಅನುಮತಿ ಪತ್ರ ವಿತರಣೆ	ರೂ. 500/-
2.	ಹಕ್ಕು ಬದಲಾವಣೆ ನಕಲು ಪ್ರತಿ ವಿತರಣಾ ಶುಲ್ಕ	ರೂ. 50/-
3.	ಸ್ಥಿರಾಸ್ತಿ ಹಕ್ಕು ಬದಲಾವಣೆ	ಛಾಪಾ ಕಾಗದ ಬೆಲೆಯ ಮೇಲೆ ಶೇ. 1 ರಷ್ಟು
4.	ನಗರ ಪಂಚಾಯತ್ ಕಟ್ಟಡಗಳ (ಸಮುದಾಯ ಭವನ, ಮೈದಾನ) ಬಾಡಿಗೆ	ರೂ. 50/-
5.	ನಮೂನೆ 3 ನಕಲು ವಿತರಣಾ ಶುಲ್ಕ	ರೂ. 100/-

b) ದಂಡನೆಗಳು :

ಕ್ರ.ಸಂ.	ವಿವರಗಳು	ಶುಲ್ಕ
1.	ಸರಕಾರಿ ಜಾಗ ಅತಿಕ್ರಮಣ	ರೂ. 50/- ಪ್ರತೀ ಚ. ಅಡಿಗೆ

c) ಸೂಚನೆಗಳು :

1. ಸರ್ಕಾರಿ ಜಾಗ ಅತಿಕ್ರಮಿಸಿದವರು ತಮ್ಮ ಸ್ವಂತ ಖರ್ಚಿನಿಂದ ಅತಿಕ್ರಮಿಸಿದ ಜಾಗದಲ್ಲಿ ಕಟ್ಟಿರುವ ಕಟ್ಟಡವನ್ನು ಧ್ವಂಸಗೊಳಿಸತಕ್ಕದ್ದು. ಜೊತೆಗೆ ಮೇಲೆ ತಿಳಿಸಿದಂತೆ ದಂಡನೆಯನ್ನು ನಗರ ಪಂಚಾಯತ್ ಗೆ ಪಾವತಿಸತಕ್ಕದ್ದು.
2. ಬೈಲಾ ಅನುಮೋದನೆಗೊಂಡ ದಿನಾಂಕ ದಿಂದ ಪ್ರತೀ ವರ್ಷಕ್ಕೊಮ್ಮೆ ಆರೋಗ್ಯ ವಿಭಾಗಕ್ಕೆ ಸಂಬಂಧಿಸಿದ ಸೇವಾ ಶುಲ್ಕಗಳು ಮತ್ತು **ದಂಡನೆಗಳ ಶುಲ್ಕಗಳನ್ನು ಶೇ. 5 ರಷ್ಟು ಹೆಚ್ಚಿಸಲಾಗುವುದು**.
3. ಸರ್ಕಾರದಿಂದ ಬರುವ ನಿರ್ದೇಶನ/ಆದೇಶದಂತೆ ಮೇಲ್ಕಂಡ ಶುಲ್ಕಗಳನ್ನು ಮರು ಪರಿಷ್ಕರಿಸುವ ನಗರ ಪಂಚಾಯತ್ ಗೆ ಇರುತ್ತದೆ.
4. ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ಸೇವೆಗಳಿಗೆ / ದಂಡನೆಗಳಿಗೆ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಪರಿಶೀಲಿಸಿ ತಮ್ಮ ವಿವೇಚನಾಧಿಕಾರ ಬಳಸಿ ಶುಲ್ಕ ನಿಗದಿ ಪಡಿಸಿ, ವಸೂಲಾತಿ ಮಾಡಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.
5. ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

4. ತಾಂತ್ರಿಕ ಶಾಖೆಗೆ ಸಂಬಂಧಿಸಿದ ಸೇವಾ ಶುಲ್ಕಗಳು ಮತ್ತು ದಂಡನೆಗಳು

a) ಸೇವೆಗಳು :

i)

ಕ್ರ. ಸಂ.	ವಿವರಗಳು	ಮಾಸಿಕ ಶುಲ್ಕ (ರೂ. ಗಳಲ್ಲಿ)			
		ಗೃಹ ಬಳಕೆ/ ವಸತಿ	ವಾಣಿಜ್ಯ	ಕೈಗಾರಿಕೆ	ಖಾಸಗಿ/ಧಾರ್ಮಿಕ/ ಶೈಕ್ಷಣಿಕ ಮತ್ತು ಸಾರ್ವಜನಿಕ ಕಟ್ಟಡಗಳಿಗೆ
1.	ನೀರು ಸರಬರಾಜು ಮಾಸಿಕ ದರ	130/-	300/-	500/-	200/-
2.	ನೀರಿನ ಸಂಪರ್ಕ ಶುಲ್ಕ	2500/-	5000/-	10000/-	5000/-
3.	ಕಟ್ಟಡ ಪರವಾನಿಗೆ ಶುಲ್ಕ (ಕಟ್ಟಡ ವಿಸ್ತೀರ್ಣಕ್ಕೆ)	60/- ಪ್ರತೀ ಚ. ಮೀ.ಗೆ	100/- ಪ್ರತೀ ಚ. ಮೀ.ಗೆ	140/- ಪ್ರತೀ ಚ. ಮೀ.ಗೆ	100/- ಪ್ರತೀ ಚ. ಮೀ.ಗೆ
4.	ಅಭಿವೃದ್ಧಿ ಶುಲ್ಕ (ನಿವೇಶನ ವಿಸ್ತೀರ್ಣಕ್ಕೆ)	100/- ಪ್ರತೀ ಚ. ಮೀ.ಗೆ	125/- ಪ್ರತೀ ಚ. ಮೀ.ಗೆ	150/- ಪ್ರತೀ ಚ. ಮೀ.ಗೆ	125/- ಪ್ರತೀ ಚ. ಮೀ.ಗೆ
5.	ಕಟ್ಟಡ ನವೀಕರಣ ಶುಲ್ಕ	60/- ಪ್ರತೀ ಚ. ಮೀ.ಗೆ	100/- ಪ್ರತೀ ಚ. ಮೀ.ಗೆ	140/- ಪ್ರತೀ ಚ. ಮೀ.ಗೆ	100/- ಪ್ರತೀ ಚ. ಮೀ.ಗೆ
6.	ಕಟ್ಟಡ ಮಾರ್ಪಾಡಿಸುವಿಕೆ/ ವಿಸ್ತರಣೆ ಶುಲ್ಕ	60/- ಪ್ರತೀ ಚ. ಮೀ.ಗೆ	100/- ಪ್ರತೀ ಚ. ಮೀ.ಗೆ	140/- ಪ್ರತೀ ಚ. ಮೀ.ಗೆ	100/- ಪ್ರತೀ ಚ. ಮೀ.ಗೆ
7.	ಸ್ವಾಧೀನ ಪ್ರಮಾಣ ಪತ್ರ	500/-	1000/-	1500/-	1000/-
8.	ಆವರಣ ಗೋಡೆ ಪರವಾನಿಗೆ ಶುಲ್ಕ	50/- ಪ್ರತೀ ಮೀ.ಗೆ	50/- ಪ್ರತೀ ಮೀ.ಗೆ	50/- ಪ್ರತೀ ಮೀ.ಗೆ	50/- ಪ್ರತೀ ಮೀ.ಗೆ

ಸೂಚನೆಗಳು :

1. ಚ.ಮೀ. ಎಂದರೆ ಚದರ ಮೀಟರ್
2. ಮೀ. ಎಂದರೆ ಮೀಟರ್

ii)

ಕ್ರ. ಸಂ.	ವಿವರಗಳು		ಸೇವಾ ಶುಲ್ಕ (ರೂ. ಗಳಲ್ಲಿ)
1.	**LBD ಲೈಸೆನ್ಸ್ ವಾರ್ಷಿಕ ಶುಲ್ಕ**		
	i)	ಆರ್ಕಿಟೆಕ್ಟ್	3000/-
	ii)	ಇಂಜಿನಿಯರ್ಸ್	2000/-
	iii)	ಸುಪರ್ ವೈಸರ್ಸ್	1000/-
2.	**LBD ಲೈಸೆನ್ಸ್ ನವೀಕರಣ ಶುಲ್ಕ**		
	i)	ಆರ್ಕಿಟೆಕ್ಟ್	3000/-
	ii)	ಇಂಜಿನಿಯರ್ಸ್	2000/-
	iii)	ಸುಪರ್ ವೈಸರ್ಸ್	1000/-
3.	**ಪರಿಶೀಲನಾ ಶುಲ್ಕ**		500/-
4.	**ಬೋರ್ ವೆಲ್ ನಿರಾಕ್ಷೇಪಣಾ ಪತ್ರ**		500/-
5.	**ರಸ್ತೆ ಕಡಿತದ ದರ (Road Cutting Charge)**		
	i)	ಬಿಟುಮನ್ ರಸ್ತೆ	500/- ಪ್ರತೀ ಮೀ. ಗೆ
	ii)	ಕಾಂಕ್ರೀಟ್ ರಸ್ತೆ	1000/- ಪ್ರತೀ ಮೀ. ಗೆ
	iii)	ಮಣ್ಣಿನ ರಸ್ತೆ	75/- ಪ್ರತೀ ಮೀ. ಗೆ
6.	ಪ್ಲಂಬಿಂಗ್ ಲೈಸೆನ್ಸ್		1000/-
7.	ಪ್ಲಂಬಿಂಗ್ ಲೈಸೆನ್ಸ್ ನವೀಕರಣ		1000/-
8.	ನೀರಿನ ಜೋಡಣೆಯನ್ನು ಸ್ಥಗಿತ ಮಾಡಿರುವುದನ್ನು ಮರು ಜೋಡಣೆ ಮಾಡುವುದು		500/-
9.	ದೃಢೀಕರಣ ಪತ್ರ		500/-

b) ದಂಡನೆಗಳು :

ಕ್ರ. ಸಂ.	ವಿವರಗಳು	ಶುಲ್ಕ
1.	ಅನಧಿಕೃತ ನೀರಿನ ಸಂಪರ್ಕ	ರೂ. 5000/-
2.	ಅನಧಿಕೃತ ಕಟ್ಟಡ ನಿರ್ಮಾಣ	ರೂ. 5000/-
3.	ಕಡಿತಗೊಳಿಸಿರುವ ನೀರಿನ ಸಂಪರ್ಕವನ್ನು ಅನಧಿಕೃತವಾಗಿ ಮರು ಸಂಪರ್ಕಗೊಳಿಸಿರುವುದು	ರೂ. 5000/-

c) ಸೂಚನೆಗಳು :

1. ಬೈಲಾ ಅನುಮೋದನೆಗೊಂಡ ದಿನಾಂಕ ದಿಂದ ಪ್ರತೀ ವರ್ಷಕ್ಕೊಮ್ಮೆ ಆರೋಗ್ಯ ವಿಭಾಗಕ್ಕೆ ಸಂಬಂಧಿಸಿದ **ಸೇವಾ ಶುಲ್ಕಗಳು ಮತ್ತು ದಂಡನೆಗಳ ಶುಲ್ಕಗಳನ್ನು ಶೇ. 5 ರಷ್ಟು ಹೆಚ್ಚಿಸಲಾಗುವುದು**.
2. ಸರ್ಕಾರದಿಂದ ಬರುವ ನಿರ್ದೇಶನ/ಆದೇಶದಂತೆ ಮೇಲ್ಕಂಡ ಶುಲ್ಕಗಳನ್ನು ಮರು ಪರಿಷ್ಕರಿಸುವ ನಗರ ಪಂಚಾಯತ್ ಗೆ ಇರುತ್ತದೆ.
3. ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ಸೇವೆಗಳಿಗೆ / ದಂಡನೆಗಳಿಗೆ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಪರಿಶೀಲಿಸಿ ತಮ್ಮ ವಿವೇಚನಾಧಿಕಾರ ಬಳಸಿ ಶುಲ್ಕ ನಿಗದಿ ಪಡಿಸಿ, ವಸೂಲಾತಿ ಮಾಡಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.

4. ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

5. ಆರೋಗ್ಯ ಶಾಖೆಗೆ ಸಂಬಂಧಿಸಿದ ಸೇವಾ ಶುಲ್ಕಗಳು ಮತ್ತು ದಂಡನೆಗಳು

a) ಸೇವೆಗಳು :

ಕ್ರ. ಸಂ.	ವಿವರಗಳು	ಶುಲ್ಕ
1.	ಜನನ-ಮರಣ ಪ್ರಮಾಣ ಪತ್ರ ತಿದ್ದುಪಡಿ	ರೂ. 100/-
2.	ಶಾಶ್ವತ ಜಾಹೀರಾತು ಫಲಕಗಳ ಅಳವಡಿಕೆ	ರೂ. 80/- ಪ್ರತೀ ಚ. ಅಡಿಗೆ
3.	ಶಾಶ್ವತ ಜಾಹೀರಾತು ಫಲಕಗಳ ಅಳವಡಿಕೆಗಾಗಿ ಉಪಯೋಗಿಸುವ ಸರ್ಕಾರಿ ಜಾಗದ ಸ್ಥಳ ಬಾಡಿಗೆ (ಜಾಹೀರಾತು ಫಲಕ ಆವರಿಸುವ ಜಾಗ)	ರೂ. 80/- ಪ್ರತೀ ಚ. ಅಡಿಗೆ
4.	ಬ್ಯಾನರ್ /ಕಟೌಟ್/ಫ್ಲೆಕ್ಸ್ ಮತ್ತು ಇತರೆ ತಾತ್ಕಾಲಿಕ ಜಾಹೀರಾತು ಅಳವಡಿಕೆ	
	ಅ) 80 ಚ. ಅಡಿಗಳಿಗಿಂತ ಕಡಿಮೆಯುಳ್ಳ ಬ್ಯಾನರ್ ಗಳಿಗೆ	ರೂ. 100/- + ತೆರಿಗೆಗಳು
	ಆ) 80 ರಿಂದ 120 ಚ. ಅಡಿಗಳಿಗಳುಳ್ಳ ಬ್ಯಾನರ್ ಗಳಿಗೆ	ರೂ. 250/- + ತೆರಿಗೆಗಳು
	ಇ) 120 ಚ. ಅಡಿಗಳಿಗಿಂತ ಹೆಚ್ಚು ಅಡಿಗಳಿಗಳುಳ್ಳ ಬ್ಯಾನರ್ ಗಳಿಗೆ	ರೂ. 300/- + ತೆರಿಗೆಗಳು
5.	ಖಾಸಗಿ/ಸಾರ್ವಜನಿಕ ಕಾರ್ಯಕ್ರಮಗಳಿಗೆ ಅನುಮತಿ ಪತ್ರ	ರೂ. 500/-
6.	**ಮುಲ್ಕಿ ನಗರ ಪಂಚಾಯತ್ ಸೆಸ್ ಪೂಲ್ (ಸಕ್ಕಿಂಗ್ ಯಂತ್ರ) ವಾಹನದ ಬಾಡಿಗೆಯ ದರ**	
	ಅ) ಬಿ.ಪಿ.ಎಲ್/ಆಶ್ರಯ ಮನೆಗಳು	1000/-
	ಆ) ಸರಕಾರಿ ಕಚೇರಿ/ಧಾರ್ಮಿಕ ಕೇಂದ್ರಗಳು	1500/-
	ಇ) ಇತರ ವಾಸದ ಮನೆಗಳು	4000/-
	ಈ) ವಾಣಿಜ್ಯ ಕಟ್ಟಡ	4500/-
	ಉ) ನಗರ ಪಂಚಾಯತ್ ನ ಹೊರ ಭಾಗ ಪ್ರತಿ ಕಿ. ಮೀ ಗೆ ದರ	100/-
	ಊ) ಖಾಸಗಿ ಸೆಸ್ ಪೂಲ್ (ಸಕ್ಕಿಂಗ್ ಯಂತ್ರ)ದ ಮುಖಾಂತರ ನಗರ ಪಂಚಾಯತ್ ಸಂಸ್ಕರಣ ಘಟಕದಲ್ಲಿ ವಿಲೇವಾರಿ (ಪ್ರತಿ ಟ್ರಿಪ್ ದರ)	500/-
7.	ಉದ್ದಿಮೆ ಪರವಾನಿಗೆಯ ನಕಲು ಪ್ರತಿ	100/-

b) ಸೂಚನೆಗಳು :

i) **ಬ್ಯಾನರ್ /ಕಟೌಟ್/ಫ್ಲೆಕ್ಸ್ ಮತ್ತು ಇತರೆ ತಾತ್ಕಾಲಿಕ ಜಾಹೀರಾತು ಅಳವಡಿಕೆಗೆ ವಿಧಿಸಿರುವ ಶುಲ್ಕ 15 ದಿವಸಗಳ ಅವಧಿಗೆ ಮಾತ್ರ ಅನ್ವಯಿಸುತ್ತದೆ**.

ii) ಬೈಲಾ ಅನುಮೋದನೆಗೊಂಡ ದಿನಾಂಕದಿಂದ ಪ್ರತಿ ವರ್ಷಕೊಮ್ಮೆ **ಸೇವಾ ಶುಲ್ಕವನ್ನು ಶೇಕಡಾ 5% ಹೆಚ್ಚಿಸಲಾಗುವುದು.**

iii) ಸರ್ಕಾರದಿಂದ ಬರುವ ನಿರ್ದೇಶನ/ ಆದೇಶದಂತೆ ಮೇಲ್ಕಂಡ ಶುಲ್ಕವನ್ನು ಮರು ಪರಿಷ್ಕರಿಸುವ ಅಧಿಕಾರ ನಗರ ಪಂಚಾಯತ್‌ಗೆ ಇರುತ್ತದೆ.

iv) ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ಸೇವೆಗಳಿಗೆ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಪರಿಶೀಲಿಸಿ ತಮ್ಮ ವಿವೇಚನಾಧಿಕಾರ ಬಳಸಿ ಶುಲ್ಕ ನಿಗದಿ ಪಡಿಸಿ, ವಸೂಲಾತಿ ಮಾಡಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.

v) ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು

ಉದ್ದಿಮೆ ಪರವಾನಿಗೆ ಶುಲ್ಕವನ್ನು, ಘನತ್ಯಾಜ್ಯ ವಿಲೇವಾರಿ ಸೇವಾ ಶುಲ್ಕ, ಕಟ್ಟಡ ನಿರ್ಮಾಣ ಮತ್ತು ಕೆಡುಹುವಿಕೆ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 (Construction And Demolition Waste Management Rules 2016) ರೀತ್ಯಾ ವೈಜ್ಞಾನಿಕ ವಿಲೇವಾರಿ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮ 2016, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ತಿದ್ದುಪಡಿ ನಿಯಮಗಳು 2021 ಮತ್ತು ಏಕ ಬಳಕೆಯ ಪ್ಲಾಸ್ಟಿಕ್ ಬಳಕೆ, ಬೃಹತ್ ತ್ಯಾಜ್ಯೋತ್ಪಾದಕರ (Bulk waste Generators) ಹಾಗು ಘನತ್ಯಾಜ್ಯ ವಸ್ತುಗಳ ನಿರ್ವಹಣೆ ನಿಯಮ 2016 ಕ್ಕೆ ಸಂಬಂಧಪಟ್ಟಂತೆ ವಿವಿಧ ಸೇವಾ ಶುಲ್ಕ, ದಂಡ ವಿಧಿಸುವ ಮತ್ತು ಇನ್ನಿತರೆ ಕ್ರಮಗಳ ವಿವರಗಳು ಈ ಕೆಳಗಿನಂತಿದೆ.

c) ಉದ್ದಿಮೆ ಪರವಾನಿಗೆ :

ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ 256, 324 ಪ್ರಕರಣಗಳಡಿ ಪ್ರದತ್ತವಾದ ಅಧಿಕಾರದ ಮೂಲಕ ಶುಲ್ಕಗಳನ್ನು ಮುಲ್ಕಿ ನಗರ ಪಂಚಾಯತ್ ಆದಾಯ ಹಿತದೃಷ್ಟಿಯಿಂದ ಪರಿಷ್ಕೃತಗೊಳಿಸಲು ಉದ್ದೇಶಿಸಿ ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ವಿವಿಧ ಉದ್ದಿಮೆ ವ್ಯಾಪಾರ, ವಹಿವಾಟು ಮತ್ತು ಇತರ ಚಟುವಟಿಕೆಗಳನ್ನು ನಡೆಸಲು ಉದ್ದಿಮೆ ಪರವಾನಿಗೆ ನೀಡುವ ಸಂದರ್ಭ ವಿಧಿಸಬಹುದಾದ ಪರವಾನಿಗೆ ಶುಲ್ಕವನ್ನು ನಗರ ಪಂಚಾಯತ್‌ನ ನಿರ್ಣಯ ನಂಬ್ರ 153, ದಿನಾಂಕ: 28.03.2015 ರಲ್ಲಿ ಕೈಗೊಂಡ ತೀರ್ಮಾನ/ಆದೇಶದಂತೆ 2016-17ನೇ ಸಾಲಿನಿಂದ ಪರಿಷ್ಕೃತ ಶುಲ್ಕವನ್ನು ಪಡೆಯಲಾರಂಭಿಸಲಾಗಿರುತ್ತದೆ.

ಆದರೆ ತದನಂತರ ಇಲ್ಲಿಯ ತನಕ ದರ ಪರಿಷ್ಕರಣೆಗೊಂಡಿರುವುದಿಲ್ಲ. ಉದ್ದಿಮೆ ಪರವಾನಗಿ ಶುಲ್ಕ ವಸೂಲಾತಿಯಿಂದ ಮುಲ್ಕಿ ನಗರ ಪಂಚಾಯತ್‌ಗೆ ಕನಿಷ್ಠ ಪ್ರಮಾಣದಲ್ಲಿ ಆದಾಯ ಬರುತ್ತಿದ್ದು ಈ ನಿಟ್ಟಿನಲ್ಲಿ ಪೌರಾಡಳಿತ ನಿರ್ದೇಶನಾಲಯದಿಂದ ಜಾರಿಗೊಳಿಸಲಾದ ಮಾದರಿ ಬೈಲಾದಲ್ಲಿ ವಿವರಿಸಲಾದ ವಿವಿಧ ಉದ್ದಿಮೆಯ ವರ್ಗೀಕರಣ ಮತ್ತು ವಿಧಿಸಬಹುದಾದ ಕನಿಷ್ಠ ಪರವಾನಿಗೆ ಶುಲ್ಕ ಹಾಗು ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಧಿಸಿರುವ ಉದ್ದಿಮೆ ಪರವಾನಗಿ ಶುಲ್ಕ ಮತ್ತು ಉದ್ದಿಮೆ ವ್ಯಾಪಾರಗಳ ವರ್ಗಿಕರಣ ಇತ್ಯಾದಿ ಆಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಮುಲ್ಕಿ ನಗರ ಪಂಚಾಯತ್‌ಗೆ ಹೆಚ್ಚಿನ ಆದಾಯ ಬರುವ ಹಿತದೃಷ್ಟಿಯೊಂದಿಗೆ ಈ ಹಿಂದೆ
ವಿಧಿಸಲಾದ ಪರವಾನಿಗೆ ಶುಲ್ಕ ಮತ್ತು ಹೆಚ್ಚಿನ ಸಂಖ್ಯೆಯ ಉದ್ದಿಮೆಗಳ ವಿಧಗಳನ್ನು ಮರು ಪರಿಷ್ಕರಿಸಿ, ವಿಧಿಸಲಾದ ಪರಿಷ್ಕೃತ ಉದ್ದಿಮೆ ಶುಲ್ಕ ಮತ್ತು ಇತರೆ ವಿವರಗಳು ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ಉದ್ದಿಮೆಯ ಹೆಸರು	ಪ್ರಸ್ತುತ ವಿಧಿಸುತ್ತಿರುವ ಪರವಾನಿಗೆ ಶುಲ್ಕ	ಪರಿಷ್ಕೃತ ಪರವಾನಿಗೆ ಶುಲ್ಕ
1	ಮಾನವ ಸಂಪನ್ಮೂಲ	1650	1750
2	ದ್ವಿಚಕ್ರ ವಾಹನಗಳ ಬಾಡಿಗೆ ಉದ್ದಿಮೆ	1100	1200
3	ಕಾಸ್ಮೊಟ್ಯಮ್ ಸೆಂಟರ್	1100	1200
4	Fashion and Embroidery Works	1500	1700
5	Tatto (ಹಚ್ಚೆ ಹಾಕುವುದು)	1100	1300
6	ಸಹಕಾರಿ ಸಂಘ	1100	1200
7	ವಸತಿ ಗೃಹ	1100	1350
8	ಕ್ಲಿನಿಕ್ - Clinic	550	650
9	ಬಾರ್ ಮತ್ತು ರೆಸ್ಟೋರೆಂಟ್	1650	2000
10	ವೈನ್ ಶಾಪ್ (ಮದ್ಯದ ಅಂಗಡಿ)	550	1000
11	ಪೆಟ್ರೋಲ್ ಬಂಕ್	1650	2000
12	ವರ್ಕ್ ಶಾಪ್	1100	1300
13	ಬ್ಯೂಟಿ ಪಾರ್ಲರ್	550	850
14	ಫ್ಯಾನ್ಸಿ ಸ್ಟೋರ್	550	800
15	ಸೈಕಲ್ ಶಾಪ್ / ರಿಪೇರಿ	550	600

16	ಜೆರಾಕ್ಸ್	715	800
17	ಕಾಫೀ ಪುಡಿ ಅಂಗಡಿ (ಕಾಫೀ ವರ್ಕ್ಸ್)	550	750
18	ಜವಳಿ (ಬಟ್ಟೆ) ಅಂಗಡಿ	550	850
19	ತರಕಾರಿ ಅಂಗಡಿ	550	850
20	ಫರ್ನೀಚರ್ ಅಂಗಡಿ/ ಪರ್ನಿಚರ್ ತಯಾರಿಕೆ	550	850
21	ಕೇಬಲ್ ನೆಟ್‌ವರ್ಕ್	715	850
22	ಹೋಟೆಲ್ ಸಸ್ಯಹಾರಿ	550	800
23	ಹೋಟೆಲ್ ಮಾಂಸಹಾರಿ	550	850
24	ಮೊಬೈಲ್ ಅಂಗಡಿ(ಮಾರಾಟ)	550	700
25	ಮೊಬೈಲ್ ಅಂಗಡಿ (ರಿಪೇರಿ)	550	700
26	ಟೈಲರಿಂಗ್ ಶಾಪ್	550	800
27	ಚಿಕ್ಕನ್/ಮಟನ್ ಅಂಗಡಿ	550	800
28	ಸರ್ವಿಸ್ ಸ್ಟೇಶನ್	2200	2400
29	ಬೀಡಿ ತಯಾರಿಕೆ	1320	1450
30	ಎಣ್ಣೆ / ಆಯಿಲ್ ಮೀಲ್	550	850
31	ರೈಸ್ ಮೀಲ್	1100	1300
32	ಶಾವಿಗೆ	550	700
33	ಸೌಂಡ್ ಸಿಸ್ಟಂ	715	1000
34	ಟೂರ್ಸ್ ಅಂಡ್ ಟ್ರಾವೆಲ್ಸ್ / Tours and Travels	550	850
35	ಸ್ಟೇಷನರಿ	825	1000
36	ಡ್ರೈವಿಂಗ್ ಶಾಲೆ	825	1000
37	ಸಿಮೆಂಟ್ ಮಾರಾಟ	825	1000
38	ಕನ್ನಡಕಗಳ ಮಾರಾಟ ಅಂಗಡಿ	825	1000
39	ಟೈರ್ ಅಂಗಡಿ	825	1000
40	ಆಟೋಮೊಬೈಲ್	825	1000
41	ಸುಣ್ಣದ ಅಂಗಡಿ	715	850
42	ಜೋತಿಷ್ಯ	550	850
43	ಜ್ಯೂಸ್ ಸೆಂಟರ್	550	850
44	ಬಳೆಗಳ ಅಂಗಡಿ	550	800
45	ಕಂಪ್ಯೂಟರ್ ತರಬೇತಿ ಕೇಂದ್ರ	550	850
46	ಚಿಲ್ಲರೆ ಅಂಗಡಿ	550	800
47	ವೆಲ್ಡಿಂಗ್ ಶಾಪ್	1100	1300
48	ಕರ್ಪೂರ/ಮೇಣದ ಬತ್ತಿ	550	650
49	Printing press	825	1100
50	ವ್ಯಾಯಾಮ ಶಾಲೆ	825	1100
51	ಬ್ರೆಡ್ ಟೋಸ್ಟ್ ಬೇಕರಿ	550	850
52	ಬ್ರೆಡ್ ಟೋಸ್ಟ್ ಬೇಕರಿ (ಮಧ್ಯಮ)	715	900
53	ಬ್ರೆಡ್ ಟೋಸ್ಟ್ ಬೇಕರಿ (ದೊಡ್ಡ)	825	1000
54	ಹಿಟ್ಟಿನ ಗಿರಣಿ (ಮಧ್ಯಮ)	825	900
55	ಮಾಂಸಾಹಾರಿ ಹೋಟೆಲ್ (ಮಧ್ಯಮ)	825	1000
56	ಸಸ್ಯಹಾರಿ ಹೋಟೆಲ್ (ಮಧ್ಯಮ)	1100	1300
57	ವಸತಿ ಗೃಹಗಳು (ದೊಡ್ಡ)	2200	2500
58	ಫೋಟೋ ಸ್ಟುಡಿಯೋ	550	850
59	ಕಬ್ಬಿಣ ಮತ್ತು ಸ್ಟೀಲ್ ಅಂಗಡಿ(ಮನೆ ಬಳಕೆ)	880	1000
60	ಹೋಟೆಲ್ (ಶ್ರೇಣಿ -2)	2750	3000
61	ವಸತಿ ಗೃಹ (ಶ್ರೇಣಿ -2)	2750	3000
62	ಕೇಟರಿಂಗ್	550	1000
63	ಕಾಫೀ ಟೀ ಕ್ಯಾಂಟೀನ್ (ಬಿ ದರ್ಜೆ)	550	750
64	ಮಾಸಲಾ ಪೌಡರ್ ತಯಾರಿಕೆ (ಬಿ ದರ್ಜೆ)	550	850
65	ಮಟನ್ ಅಂಗಡಿ (ಬಿ ದರ್ಜೆ)	550	850
66	ತಂಪು ಪಾನೀಯ ಅಂಗಡಿ (ಗ್ರೇಡ್ -2)	715	850
67	ಎಣ್ಣೆ ಮತ್ತು ಹಿಟ್ಟಿನ ಗಿರಣಿ	825	1000
68	ಅಲ್ಯೂಮಿನಿಯಂ ರಕಂ ಮಾರಟ	825	1000
69	ಡೆಕೋರೇಟ್ ಉದ್ಯಮ	825	1000
70	ಫಾಸ್ಟ್ ಫುಡ್ ಸೆಂಟರ್	825	1000
71	ಪೇಪರ್ ಪ್ಲೇಟ್ ತಯಾರಿಕ ಘಟಕ	825	1000

72	ಹಳೆ ಮನೆ ಸಾಮಾಗ್ರಿಗಳ ಮಾರಾಟ	825	1000
73	ಆಹಾರ ಪದಾರ್ಥ ಉತ್ಪನ್ನಗಳ ತಯಾರಿಕೆ & ಮಾರಾಟ	825	1000
74	ವಿದ್ಯುತ್ ಚಾಲಿತ ಯಂತ್ರ 41 ರಿಂದ 100 ಅಶ್ವಶಕ್ತಿವರೆಗೆ	1650	1850
75	ದ್ವಿಚಕ್ರ-ತ್ರಿಚಕ್ರ ವಾಹನಗಳ ಸರ್ವಿಸ್ ಸೆಂಟರ್	825	1000
76	ವಾಹನಗಳ ಬಿಡಿಭಾಗಗಳ ಮಾರಾಟ	825	950
77	ಕಟ್ಲೇರಿ ಅಂಗಡಿ	550	750
78	ಕಂಪ್ಯೂಟರ್ ಮತ್ತು ಸಿಸಿ ಟಿವಿ ಸೇಲ್ಸ್ ಮತ್ತು ರಿಪೇರಿ	825	1000
79	ಹಾರ್ಡ್‌ವೇರ್ ಮತ್ತು ಸಿಮೆಂಟ್ ವ್ಯಾಪಾರ	880	1000
80	ಆಸ್ಪತ್ರೆ	1100	1500
81	ಬೀಡಾ ಬೀಡಿ ಅಂಗಡಿ	550	650
82	ಕಟ್ಟಿಗೆ ಡಿಪ್ಪೊ	550	650
83	ಗುಜರಿ ವ್ಯಾಪಾರ	2200	2500
84	ಸ್ವಿಕ್ಕರ್ ಕಟ್ಟಿಂಗ್	550	850
85	ಸರ್ವಿಸ್ ಸ್ಟೇಷನ್ 10 ಹೆಚ್ ಪಿ	1155	1350
86	ತರಕಾರಿ ವ್ಯಾಪಾರ ಮತ್ತು ಹಣ್ಣುಹಂಪಲು ಅಂಗಡಿ	550	850
87	ಜೆರಾಕ್ಸ್ & ಡಿ ಟಿ ಪಿ	825	1000
88	ಅಲ್ಯುಮಿನಿಯಂ ಫ್ಯಾಬ್ರಿಕೇಷನ್	550	800
89	ಅಕ್ಕಿ ಗಿರಣಿ (ಎ ದರ್ಜಿ)	1650	1850
90	ಐಸ್ ಕ್ರೀಂ ಮತ್ತು ತಂಪು ಪಾನೀಯ ಮಾರಾಟ (ದೊಡ್ಡ ಉದ್ದಿಮೆ)	1375	1600
91	ಹಾರ್ಡ್‌ವೇರ್ ಅಂಗಡಿ	825	1000
92	ಸೈಬರ್ & ಜೆರಾಕ್ಸ್	1000	1100
93	ಜನರಲ್ ಸ್ಟೋರ್ಸ್(ದೊಡ್ಡದು)	550	850
94	ಚಿನ್ನ, ಬೆಳ್ಳಿ ಆಭರಣಗಳ ತಯಾರಿ ಮತ್ತು ಮಾರಾಟ (ದೊಡ್ಡದು)	1100	1300
95	ದಂತ ಚಿಕಿತ್ಸಾಲಯ	825	1000
96	ಜ್ಯೂಸ್, ಐಸ್‌ಕ್ರೀಂ ತಯಾರಿಕೆ & ಮಾರಾಟ	1100	1300
97	ಡಿಜಿಟಲ್ ಪ್ರಿಂಟಿಂಗ್ (ಪ್ರಿಂಟಿಂಗ್ ಪ್ರೆಸ್)	825	1000
98	ಸೋಪು & ಫಿನಾಯಿಲ್ ತಯಾರಿಕಾ ಘಟಕ (ಗೃಹ ಕೈಗಾರಿಕೆ)	825	1000
99	ಸೋಲಾರ್ ಸಿಸ್ಟಮ್ಸ್ ಇನ್‌ವರ್ಟರ್ ಬ್ಯಾಟರಿ, ವಾಟರ್ ಹೀಟರ್ ಪೆನಲ್ ಮಾರಾಟ	825	1000
100	ಪಶು ಮತ್ತು ಕೋಳಿ ಆಹಾರ ಮಾರಾಟ	825	1000
101	ಗುತ್ತಿಗೆದಾರರ ಕಛೇರಿ	825	1000
102	Interiors & Furnitures Shop	825	1000
103	ಬಟ್ಟೆ ಅಂಗಡಿ & ಫ್ಯಾನ್ಸಿ ಸೆಂಟರ್	1100	1300
104	ಶಾಮಿಯಾನ	550	850
105	ಸಸ್ಯಹಾರಿ & ಮಾಂಸಹಾರಿ ಹೋಟೆಲ್	1650	2000
106	ಪಾದರಕ್ಷೆ ಅಂಗಡಿ ಗ್ರೇಡ್-1	550	800
107	ಫೈನಾನ್ಸ್ ಗ್ರೇಡ್-1	1925	2200
108	ಫೈನಾನ್ಸ್ ಗ್ರೇಡ್-2	825	1000
109	ಗ್ಯಾಸ್ ಎಜೆನ್ಸಿ	550	850
110	ಗೇರುಬೀಜ ಸಂಸ್ಕರಣಾ ಘಟಕ	1925	2200
111	ಡಾಮರು ಮಿಕ್ಸಿಂಗ್ 40/60T HP ಡ್ರಮ್ ಮಿಕ್ಸ್ ಪ್ಲಾಂಟನ್ನು ನಡೆಸುವ ಬಗ್ಗೆ	1650	1800
112	ಇಡ್ಲಿ, ದೋಸೆ, ಆಪಾ, ಸೇವಿಗೆ ಮಾರಾಟ ಉತ್ಪಾದನೆ ಬಗ್ಗೆ	1100	1200
113	ಕಂಪನಿ ಐಟಂಗಳ ಮಾರಾಟದ ಬಗ್ಗೆ	825	1000
114	ಸೆಂಟ್ರಿಂಗ್ ಸಾಮಾನುಗಳ ದಾಸ್ತಾನು ಕೇಂದ್ರ	825	1000
115	ಸೇಲ್ಸ್ ಅಂಡ್ ಸರ್ವಿಸಸ್	825	1000
116	ಸ್ಪೋರ್ಟ್ಸ್ ಐಟಂಗಳ ಮಾರಾಟ	550	800
117	ಸಣ್ಣ ಕೈಗಾರಿಕೆ	1100	1200
118	10HP ವಿದ್ಯುತ್ ಬಳಸಿ ಸರ್ವಿಸ್ ಸ್ಟೇಷನ್ ಗ್ಯಾರೇಜ್ ನಡೆಸುವ ಬಗ್ಗೆ	825	1000
119	ಟಯರ್ ರಿಸೋಲ್ ಉದ್ಯಮದ ಬಗ್ಗೆ	550	850
120	ಜುವೆಲ್ಯರಿ ವರ್ಕ್ಸ್	550	850
121	ಚಹಾಪುಡಿ ವ್ಯಾಪಾರ	550	700
122	ಪೈಂಟ್ ಅಂಗಡಿ	550	850
123	Bricks Manufacturing Unit	1650	1850
124	ಲಾಂಡ್ರಿ	550	850

125	ಜೀನು ಸಾಕಣೆ ಸಂಸ್ಕರಣೆ	825	1000
126	ಹರ್ಬಲ್ ಪ್ರೋಡೆಕ್ಟ್ಸ ಮ್ಯಾನ್ಯೂಫ್ಯಾಕ್ಚರಿಂಗ್ ಮತ್ತು ಪ್ಯಾಕಿಂಗ್	825	1000
127	ವಾಯು ಮಾಲಿನ್ಯ ತಪಾಸಣೆ ಕೇಂದ್ರ	550	700
128	ಕೋಲ್ಡ್ ಸ್ಟೋರೇಜ್	1100	1300
129	ಇಂಜಿನಿಯರಿಂಗ್ ವರ್ಕ್ಸ 10 ಹೆಚ್.ಪಿ	3850	4000
130	51-75 ಅಶ್ವಶಕ್ತಿ ಬಳಸಿ ಪೀಠೋಪಕರಣ/ ಮರದ ಕೆಲಸ ನಡೆಸುವ ಕೆಲಸ	2750	3000
131	ಮೆಡಿಕಲ್ ಶಾಪ್	550	850
132	1-10 ಬೆಡ್ಡಿನ ಆಸ್ಪತ್ರೆ	1430	1700
133	1-20 ಬೆಡ್ಡಿನ ಆಸ್ಪತ್ರೆ	2750	3000
134	ಕಬ್ಬಿನ ಜ್ಯೂಸ್	825	1000
135	ವರ್ಕ್‌ಶಾಪ್ ಗ್ರೇಡ್ - 1	825	1000
136	ಗ್ಯಾರೇಜ್	825	1000
137	ಅಡಿಕೆ ವ್ಯಾಪಾರ	825	1000
138	ಹಿಟ್ಟಿನ ಗಿರಣಿ	1155	1300
139	ಪೈಂಟ್ ಮತ್ತು ಹಾರ್ಡವೇರ್	825	1000
140	ಮರದ ಸಿಗಿದ ತುಂಡುಗಳ ದಾಸ್ತನು ಮತ್ತು ಮಾರಾಟ ಮಾಡುವ ಬಗ್ಗೆ	1650	1850
141	ಪಶು ಆಹಾರ ದಸ್ತಾನು ಕೂಡಡಿ	550	800
142	ರೆಸ್ಟೋರೆಂಟ್	825	1000
143	ಹಾಸ್ಪಿಟಲ್-10 ರಿಂದ 25 ಬೆಡ್ ಗಳದ್ದು	1650	1850
144	ಫ್ಲವರ್ ಅಂಗಡಿ	825	1000
145	ಇಂಟೀರಿಯರ್ ಡೆಕೊರೆಶನ್	825	1000
146	ಟ್ರಾವೆಲಿಂಗ್ ಎಜೆನ್ಸಿ	550	750
147	ಜೆರಾಕ್ಸ್ ಮತ್ತು ಸ್ಟೆಷನರಿ	825	1000
148	ಹೋಟೆಲ್ & ಜನರಲ್ ಸ್ಟೋರ್ಸ್	1375	1500
149	ಸಿದ್ದ ಉಡುಪುಗಳ ಮಾರಾಟ	825	1000
150	ವೈನ್ ಶಾಪ್ ಗ್ರೇಡ್-1	1100	1300
151	ವೈನ್ ಶಾಪ್ ಗ್ರೇಡ್-2	2200	2500
152	ಪೆಟ್ರೋಲ್ ಬಂಕ್ ಗ್ರೇಡ್-3	1980	2200
153	ಲೇವಾದೇವಿ/ಹಣಕಾಸು ಸಂಸ್ಥೆ ಗ್ರೇಡ್-1	825	1000
154	ಸಲೂನ್ ಶಾಪ್(ಬಿ ದರ್ಜೆ)	550	850
155	ಐಸ್ ಕ್ರೀಂ ಪಾರ್ಲರ್ (ಎ ದರ್ಜೆ)	1100	1300
156	ಫರ್ನೀಚರ್ ಅಂಗಡಿ/ ಪರ್ನಿಚರ್ ತಯಾರಿಕೆ (ಬಿ ದರ್ಜೆ)	1100	1300
157	ಕೇಬಲ್ ಗಳು ಎ-ವರ್ಗ	825	1000
158	ಹೋಟಲ್ ಸಸ್ಯಹಾರಿ ಎ-ವರ್ಗ	1650	1850
159	ಟ್ರಾನ್ಸ್ ಪೋರ್ಟ್ ಎ-ವರ್ಗ	1210	1350
160	ಸರ್ವೀಸ್ ಸ್ಟೇಷನ್ ಎ-ವರ್ಗ	1375	1600
161	ಮಸಾಲೆ ಪೌಡರ್ ಎ-ವರ್ಗ	825	1000
162	ಮಿನರಲ್ ವಾಟರ್ ತಯಾರಿಕಾ ಘಟಕ ಎ-ವರ್ಗ	2200	2500
163	ಆಯಿಲ್ ಮೀಲ್ ಎ-ವರ್ಗ	1100	1300
164	ಟೂರ್ಸ್ ಅಂಡ್ ಟ್ರಾವೆಲ್ಸ್ ಬಿ-ವರ್ಗ	825	1000
165	ಹಾಲಿನ ಅಂಗಡಿ ಎ-ವರ್ಗ	550	850
166	ಸ್ಟೇಷನರಿ ಎ-ವರ್ಗ	550	850
167	ಎಲೆಕ್ಟಾನಿಕ್ ಮತ್ತು ಎಲೆಕ್ಟಿಕಲ್ ವಕ್ಸ್ (ರಿಪೇರಿ) ಎ-ವರ್ಗ	825	1000
168	ಹೋಲ್ ಸೇಲ್ ಡಿಸ್ಟ್ರಿಬ್ಯೂಟರ್ಸ್ ಎ-ವರ್ಗ	1375	1600
169	ವಾಚ್ಸ್ ಮಾರಾಟ/ರಿಪೇರಿ ಎ-ವರ್ಗ	550	825
170	ಬಟ್ಟೆ ಮತ್ತು ಇತರೆ ಬಿ-ವರ್ಗ	1650	1800
171	ಜ್ಯೂಸ್ ಸೆಂಟರ್ ಬಿ-ವರ್ಗ	1100	1300
172	ಜಾಹಿರಾತು ಕಛೇರಿ	825	1000
173	ಬ್ಯಾಟರಿ ಸೇಲ್ಸ & ಸರ್ವಿಸ್	1100	1300
174	ಪ್ರಿಂಟಿಂಗ್ ಪ್ರೆಸ್	550	800
175	ರಖಂ ವ್ಯಾಪಾರ	825	1000
176	ವೆಲ್ಡಿಂಗ್ & ಫ್ಯಾಬ್ರಿಕೇಶನ್	1650	1800
177	ಕೂಲ್ ಡ್ರಿಂಕ್ ದಾಸ್ತಾನು	825	1000
178	ಸೌಂಡ್ಸ & ಲೈಟಿಂಗ್ಸ	825	1000
179	ಹೊಲಿಗೆ ಯಂತ್ರ ರಿಪೇರಿ &ಮಾರಾಟ	550	750

180	ಪುಸ್ತಕಗಳ ಮಾರಾಟ	550	750
181	ಕೃಷಿ ಉತ್ಪನ್ನಗಳ ಮಾರಾಟ	825	1000
182	ಬೇಕರಿ ಉತ್ಪನ್ನಗಳ ತಯಾರಿ ಮತ್ತು ಮಾರಾಟ	825	1000
183	ಇಂಟೆರಿಯರ್ ಡಿಸೈನ್	825	1000
184	ಫೋಟೋ ಸ್ಟುಡಿಯೋ	1100	1300
185	ಕ್ಯಾಂಡಲ್ ತಯಾರಿಕೆ & ತರಭೇತಿ ಕೇಂದ್ರ	1500	1650
186	ಸ್ಪೈ ಪೇಯಿಂಟ್	825	1000
187	ಕಂಪ್ಯೂಟರ್ ಐ.ಟಿ ಸರ್ವೀಸ್	1650	1800
188	ಆಟೋ ಸರ್ವೀಸ್ ಸ್ಟೇಷನ್	825	1000
189	ಟೈಲ್ಸ್ ಸ್ಯಾನಿಟರಿ ಮತ್ತು ಕಟ್ಟಡ ಸಾಮಾಗ್ರಿಗಳು	825	1000
190	20 HP ಬಳಸಿ ಇಂಟರ್ ಲೋಕ್ ತಯಾರಿಕೆ	1375	1600
191	ಗಾರ್ಮೆಂಟ್ಸ್	825	1000
192	ಫ್ಯಾನ್ಸಿ ಮತ್ತು ಫುಟ್ ವೇರ್	1100	1300
193	ಟೈಲರಿಂಗ್ ಮತ್ತು ಗಾರ್ಮೆಂಟ್ಸ್	825	1000
194	Event management	825	1000
195	ಬಾರ್ ಅಂಡ್ ರೆಸ್ಟೋರೆಂಟ್	2500	2800
196	ಮೊಬೈಲ್ ಸೇಲ್ಸ್ & ಸರ್ವಿಸ್ ನಡೆಸುವ ಬಗ್ಗೆ	550	850
197	ಯಂತ್ರೋಪಕರಣಗಳ ಬಿಡಿಬಾಗಗಳ ಮಾರಾಟದ ಬಗ್ಗೆ	825	1000
198	ಆಯುರ್ವೇದ ಔಷಧ ಮಾರಾಟದ ಬಗ್ಗೆ	550	850
199	ಫರ್ನಿಚರ್ಸ್ & ಇಲೆಕ್ಟ್ರಾನಿಕ್ಸ್ ವಸ್ತುಗಳ ಮಾರಾಟದ ಬಗ್ಗೆ	825	1000
200	ಇನ್ಸುರೆನ್ಸ್	825	1000
201	ಫ್ಯಾನ್ಸಿ ಮತ್ತು ಡ್ರೆಸ್ ಸೆಂಟರ್	825	1000
202	ಪ್ಲಾಸ್ಟಿಕ್ ಅಂಗಡಿ	715	900
203	ತಿಂಡಿ ತಿನಿಸುಗಳ ಮಾರಾಟ	550	800
204	ಪ್ಲಾಸ್ಟಿಕ್ ಸಾಮಗ್ರಿಗಳ ಮಾರಾಟ	825	1000
205	ಡಿಸ್ಟ್ರಿಬ್ಯೂಟರ್ಸ್	550	800
206	ಪೆಟ್ರೋಲ್ ಪಂಪ್	1430	1600
207	ಸೈಬರ್	825	1000
208	ಫುಡ್ ಪ್ರೊಡಕ್ಟ್ಸ	1375	1600
209	ಎಲೆಕ್ಟ್ರಾನಿಕ್ಸ್/ಬಿಡಿ ಭಾಗಗಳ ಮಾರಾಟದ ಅಂಗಡಿ	550	750
210	ಕಂಪ್ಯೂಟರ್ ಐ.ಟಿ ಸರ್ವೀಸ್ ಮತ್ತು ಸಾಫ್ಟ್ ವೇರ್ ಡೆವಲಪ್	1100	1300
211	ಟ್ಯೂಷನ್ ಕ್ಲಾಸ್ ನಡೆಸುವ ಕುರಿತು	550	800
212	ಗೋಡಾನ್ ಬಗ್ಗೆ	1100	1300
213	ಚಪ್ಪಲಿ ಅಂಗಡಿ	825	1000
214	ಟೀ-ಕಾಫಿ ಹೋಟೆಲ್	550	800
215	ಕೋಳಿ ಮಾಂಸ ಮಾರಾಟ	550	850
216	ದಿನಸಿ ವ್ಯಾಪಾರ	1100	1300
217	ಜನರಲ್ ಸ್ಟೋರ್ಸ್	825	1000
218	ಲ್ಯಾಬೊರೇಟರಿ	825	1000
219	Traders	825	1000
220	ಪುಸ್ತಕಗಳ ಮಾರಾಟ	550	750
221	ಬ್ಯಾರಲ್ ರಿಪೇರಿ ಮತ್ತು ರೀಕಂಡಿಶನ್	1650	1800
222	ಮಾಂಸಾಹಾರಿ ಊಟದ ಹೋಟೆಲ್	1100	1300
223	ಎರ್ ಕಂಡೀಶನ್ ಸರ್ವೀಸ್	825	1000
224	ಸಿವಿಲ್ ಇಂಜಿನಿಯರಿಂಗ್ ವ್ಯವಹಾರದ ಬಗ್ಗೆ	825	1000
225	ಸ್ಯಾನಿಟರಿವೇರ್, ಹೋಂ ಎಫ್ಲೆಯನ್ಸೆಸ್(ಇಂಪೋರ್ಟ್ & ಎಕ್ಸ್ ಪೋರ್ಟ್	1000	1100
226	ಕೋಚಿಂಗ್ ಕ್ಲಾಸ್ ನಡೆಸುವ ಬಗ್ಗೆ	1100	1200
227	ಆಯುರ್ವೇದ ಔಷದಿ ಮಾರಾಟ & ಚಿಕಿತ್ಸೆ	1100	1200
228	ಕನ್ಸ್ಟ್ರಕ್ಷನ್ ಆಫೀಸ್	825	1000
229	ಇಲೆಕ್ಟ್ರಾನಿಕ್ಸ್ & ಇಲೆಕ್ಟ್ರಿಕಲ್ ವ್ಯಾಪಾರದ ಬಗ್ಗೆ	825	1000
230	ವುಡ್ ವರ್ಕ್ಸ್	1650	1850
231	ಹುರಿಹಗ್ಗ,ಬುಟ್ಟಿ ಇತರ ಮಾರಾಟ	550	700
232	ಟಯರ್ ರಿಟ್ರೇಡಿಂಗ್ ವರ್ಕ್ಸ್ ಬಗ್ಗೆ	1650	1750
233	5 ಎಚ್.ಪಿ. ಮೋಟಾರು ಆಳವಡಿಸಿ ಪಂಪು ದುರಸ್ತಿ	880	1000

234	ಮೊಬೈಲ್ ಸೇಲ್ಸ್ & ಸರ್ವಿಸ್	825	1000
235	ಗುತ್ತಿಗೆದಾರರ ಕನ್ಸ್ಟ್ರಕ್ಷನ್ ಕಛೇರಿ	1100	1300
236	ಸೋಫಾ ರಿಪೇರಿ	825	1000
237	ಬುಕ್ ಸ್ಟಾಲ್ ಮತ್ತು ಜೆರಾಕ್ಸ್	550	800
238	ಹೂವಿನ ವ್ಯಾಪಾರ	550	800
239	I.T. Solutions	825	1000
240	ಸರ್ಜಿಕಲ್ಸ್	825	900
241	3HP ಬಳಸಿ ಬೇಕರಿ ಉದ್ಯಮ ನಡೆಸುವ ಬಗ್ಗೆ	1045	1250
242	ಕಟ್ಟಿಗೆ ಡಿಪ್ಪೋ (ಸಣ್ಣ)	825	900
243	ಆಡು,ಕುರಿ ಮಾಂಸ ಮಾರಾಟದ ಬಗ್ಗೆ	1100	1300
244	ಜೆರಾಕ್ಸ್ ಮತ್ತು ಸ್ಟೇಷನರಿ	825	1000
245	ಪೂಜಾ ಸಾಮಾಗ್ರಿಗಳ ಮಾರಾಟ	825	900
246	ವುಡ್ ಇಂಡಸ್ಟ್ರೀಸ್	1100	1250
247	ಬೇಕರಿ ಮತ್ತು ಜನರಲ್ ಸ್ಟೋರ್ಸ್	1100	1300
248	ಕ್ಯಾಟರಿಂಗ್ ಶಾಮಿಯಾನ ಮತ್ತು ಸೌಂಡ್ಸ್	1100	1300
249	ಹೊಟೇಲ್	1100	1300
250	ತಂಪು ಪಾನೀಯ ಮತ್ತು ಕಾಂಡಿಮೆಂಟ್ಸ್	825	1000
251	ಶಾಮಿಯಾನ ಬಾಡಿಗೆಗೆ	825	1000
252	ಆಟೋ ಎಲೆಕ್ಟ್ರೀಕಲ್ ವರ್ಕ್ಸ್	825	1000
253	ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಬಿಡಿ ವಾಹನಗಳ ಮಳಿಗೆ	1100	1300
254	ಇಂಟರ್ ಲಾಕ್ ಮತ್ತು ಸಿಮೆಂಟು ಬ್ಲಾಕ್ ಉದ್ಯಮ	1650	1850
255	ಸರ್ವಿಂಗ್ & ಎಡ್ವೆಂಚರ್ ಸ್ಟೋರ್ಸ್ ಸೆಂಟರ್	825	1000
256	ಸಿಗಡಿ ಸಿಪ್ಪೆ ತೆಗೆಯುವ ಬಗ್ಗೆ	2200	2350
257	ಮಿನರಲ್ ವಾಟರ್ ಗೋಡಾನ್ & ಲೈನ್ ಸೇಲ್ಸ್ ನಡೆಸುವ ಬಗ್ಗೆ	825	1000
258	ಹಣ್ಣು ಹಂಪಲು ಮಾರಾಟ	550	800
259	1 ಗ್ರಾಂ ಗೋಲ್ಡ್ & ಫ್ಯಾನ್ಸಿ	825	1000
260	ಮಸಾಲೆ ಹುಡಿಗಳ ಮಾರಾಟ (ಹೋಂ ಪ್ರೊಡಕ್ಟ್)	825	1000
261	ಪವರ್ ಟೂಲ್ಸ್ ಮಿಷನರಿ ಸೇಲ್ಸ್ & ರಿಪೇರಿ	825	1000
262	ಬೀಡಿ ಎಲೆ ತಂಬಾಕು	825	1000
263	ಪ್ಲಾಸ್ಟಿಕ್ ಬೈಯರ್ ವುಡನ್ ಫರ್ನಿಚರ್	825	1000
264	ಸ್ಕ್ರೂ ಫ್ಯಾಕ್ಟರಿ	1100	1250
265	ಫ್ಲೈವುಡ್ ಪೈಪು ಕಬ್ಬಿಣ ಸಾಮಾಗ್ರಿ	825	1000
266	ಪ್ಯಾಕೇಜ್ ಡ್ ಮಿನರಲ್ ವಾಟರ್ ತಯಾರಿಕೆ	2530	2800
267	5 HP ವಿದ್ಯುತ್ ಬಳಸಿ ಫ್ಲೋರ್ ಮಿಲ್ಲು	1100	1250
268	ಟ್ರಾನ್ಸ್ ಇಂಡಿಯಾ ಕಲ್ಲಿದ್ದಲು, ಮೈನ್ಸ್ & ಟ್ರಾನ್ಸ್ ಫೋರ್ಮ್ ಕ	825	1000
269	ಹಿಂದೂಸ್ಥಾನ್ ಸ್ಪನ್ ಪೈಪ್	825	1000
270	ನರ್ಸರಿ	825	950
271	ಗಿಫ್ಟ್ ಮತ್ತು ನೊವೆಲ್ಟೀಸ್	550	750
272	ಎ.ಸಿ ಮತ್ತು ರೆಫ್ರಿಜರೇಟರ್ ರಿಪೇರಿ	825	1000
273	ಫರ್ನಿಚರ್ ಅಂಗಡಿ(ಎ ವರ್ಗ)	1650	1850
274	ಫೆಬ್ರಿಕೇಶನ್ ವರ್ಕ್ಸ್	825	1000
275	Lab Equipment Sales	1100	1250
276	ಐಸ್ ಕ್ರೀಂ ಅಂಗಡಿ /ಮಾರಾಟ	550	800
277	ಗೃಹ ಉಪಯೋಗ ವಸ್ತುಗಳ ಮಾರಾಟ & ರಿಪೇರಿ ಬಗ್ಗೆ	825	1000
278	Food Processing Unit	2480	2600
279	ಸಿವಿಲ್ ಕನ್ಸಲ್ ಟೆಂಟ್	825	1000

280	ಕ್ಯಾಂಟೀನ್	550	750
281	ಫ್ಯಾಬ್ರಿಕೇಶನ್ ಎಂಡ್ ಮೆನಿಫ್ಯಾಚ್ಚರಿಂಗ್ ಆಫ್ ಇಂಜಿನಿಯರಿಂಗ್ ಎಕ್ಯೂಪ್ಮೆಂಟ್	2200	2400
282	1 ಗ್ರಾಂ ಗೋಲ್ಡ್ ಅಂಗಡಿ	550	800
283	ಮಾರ್ಕೆಟಿಂಗ್ ಆಫೀಸ್	825	1000
284	ಕ್ಯಾಟರಿಂಗ್ & ಎರೆಂಜರ್ಸ್	1375	1650
285	ಆಹಾರ ತಯಾರಿಕ ಘಟಕ ಮತ್ತು ಮಾರಾಟ 10 ರಿಂದ 20 ಹೆಚ್ ಪಿ ರವರೆಗೆ	1485	1700
286	ನಂದಿನಿ ಹಾಲು ಉತ್ಪನ್ನಗಳ ಮಾರಾಟ	550	800
287	ಕ್ಯಾಂಟೀನ್ & ಜನರಲ್ ಸ್ಟೋರ್	825	1000
288	ಮರದ ಮಿಲ್ಲು	825	1000
289	ಸಂಗೀತ ಸಾಮಾಗ್ರಿಗಳ ದುರಸ್ತಿ	550	700
290	ಸೋಫಾ ರಿಪೇರಿ ಮತ್ತು ಕುಷನ್ ವರ್ಕ್ಸ್	550	700
291	Ceramic Industries	1100	1300
292	ಅಗರಬತ್ತಿ ವ್ಯಾಪಾರ	550	750
293	Small Scale Industries	2480	2650
294	ಬೇಲ್ ಕಾರ್ನರ್	550	650
295	ಅಕ್ವೇರಿಯಂ ಮಾರಾಟ	550	800
296	ಪ್ಲಾಸ್ಟಿಕ್ ಇಂಡಸ್ಟ್ರೀಸ್	2200	2500
297	ಮೋಟಾರ್ ವೈಂಡಿಂಗ್	550	850
298	ಗೃಹಬಳಕೆ ಸಾಮಾಗ್ರಿಗಳ ಮಾರಾಟ	825	1000
299	8 ಎಚ್.ಪಿ ಬಳಸಿ ಮೋಟಾರು ಲ್ಯಾಮಿನೇಷನ್	1650	1800
300	ಜೆರಾಕ್ಸ್ ಮತ್ತು ದಸ್ತಾವೇಜು ಬರಹಗಾರರು	550	750
301	ಸುಣ್ಣ ಮತ್ತು ಸಾವಯವ ಗೊಬ್ಬರ ವ್ಯಾಪಾರ	2200	2400
302	1 ಎಚ್.ಪಿ ಬಳಸಿ ಸರ್ಜಿಕಲ್ ಫ್ಯಾಬ್ರಿಕೇಷನ್	550	750
303	ಕನ್ಸ್ಟ್ರಕ್ಷನ್ ಮೆಟೀರಿಯಲ್ ಮ್ಯಾನುಫ್ಯಾಕ್ಚರಿಂಗ್ ವರ್ಕ್ಸ್	1650	1850
304	ಕೆಮಿಕಲ್ಸ್	1500	1600
305	Scrap Business	1375	1500
306	ಕಲಾ ಮಂದಿರದ ಕಛೇರಿ	825	1000
307	ಹೋಂ ಪ್ರೊಡಕ್ಟ್ಸ	550	800
308	ಟ್ರಾವೆಲಿಂಗ್ ಎಜೆನ್ಸಿ	550	800
309	ಪ್ರಿಂಟಿಂಗ್ ಪ್ರೆಸ್	550	800
310	ಬ್ಯಾಗುಗಳ ತಯಾರಿಕೆ	1100	1200
311	ಚಿನ್ನ ಬೆಳ್ಳಿ ಆಭರಣ ತಯಾರಿಕೆ	550	800
312	ಮೀನು ಬಲೆಯ ಹಗ್ಗ ಹಾಗು ಇತರ ವಸ್ತುಗಳ ಮಾರಾಟ	825	1000
313	ಆಯುರ್ವೇದ ಔಷಧಿ ತಯಾರಿ	825	1000
314	200 ಎಚ್ ಪಿ ವಿದ್ಯುತ್ ಮೋಟಾರು ಅಳವಡಿಸಿ ಸಿಗಡಿ ಕೃಷಿ ಉದ್ಯಮ	2750	3000
315	ಸ್ಮರಣೆ ಮಾರಾಟ	550	800
316	55 ಎಚ್. ಪಿ ವಿದ್ಯುತ್ ಬಳಸಿ ಪ್ಲಾಸ್ಟಿಕ್ ಬಾಟ್ಲಿ ತಯಾರಿಕೆ	3300	3500
317	ವಯಾರ್ ತಯಾರಿಕಾ ಕಚೇರಿ	1210	1350
318	ಶೃಂಗಾರ ಸಾಧನ ಮಾರಾಟ	550	800
319	ಎಂಟಪ್ರೈಸಸ್	825	1000
320	Construction Office	825	1000
321	ಕಂಪ್ಯೂಟರ್ ಮಾರಾಟ ಮತ್ತು ಸೇವೆ , ಸೈಬರ್ ಕೆಫೆ	1375	1550
322	ಡ್ರೈ ಫ್ರೂಟ್ಸ್ ಮಾರಾಟ	825	1000
323	ಟಿ.ವಿ.ರಿಪೇರಿ	1100	1250

324	ಸೆಕೆಂಡ್ ಹ್ಯಾಂಡ್ ನಾಲ್ಕು ಚಕ್ರ ವಾಹನಗಳ ಮಾರಾಟ	1100	1300
325	ಹಬರ್ಲ್ ಉತಪ್ನನ್ನಳ ಮಾರಾಟ	1000	1200
326	ಕೋ-ಆಪರೇಟಿವ್ ಸೊಸೈಟಿ ನಡೆಸುವ ಬಗ್ಗೆ	825	1000
327	ರಸಗೊಬ್ಬರ,ಬಿತ್ತನೆಬೀಜ, ಕೀಟನಾಶಕ,ಕೃಷಿ ಸಲಕರಣೆ,ಗೃಹೋಪಯೋಗಿ ವಸ್ತುಗಳು ಇತರೆ	825	1000
328	ಮೊಬೈಲ್ ಸೇಲ್ಸ್ ಮತ್ತು ಸರ್ವಿಸ್ ಮತ್ತು ಜೆರಾಕ್ಸ್	825	1000
329	ಡೆವಲಪರ್ಸ್	825	1000
330	Super Market	825	1000
331	ಬೀಡಿ ಎಲೆ ತಂಬಾಕು ದಾಸ್ತಾನು	825	1000
332	ಜ್ಯೂಸ್ ಮತ್ತು ಫಾಸ್ಟ್ ಫುಡ್	825	1000
333	4 ಚಕ್ರ ವಾಹನದ ಗ್ಯಾರೇಜ್	1000	1200
334	ಇನ್ ಫ್ರಾಸ್ಟ್ರಕ್ಚರ್ ಆಫೀಸ್	1650	1850
335	ಬೀಡಿ ಉದ್ಯಮದ ಎಲೆ ದಾಸ್ತಾನು ಬಗ್ಗೆ	825	1000
336	ಚಹಾ ತಿಂಡಿ ಹೊಟೇಲ್	550	850
337	DANCE CLASS	1210	1350
338	ಮೀನು ಮಾರ್ಕೆಟ್ ನಡೆಸುವ ಬಗ್ಗೆ	2200	2400
339	ಮೋಪು ಮರಗಳ ಮಾರಾಟ	825	1000
340	ಪ್ಯಾಕೇಜಿಂಗ್ ಇಂಡಸ್ಟ್ರೀಸ್	2475	2650
341	ಬೇಕರಿ ಉತ್ಪನ್ನಗಳ ಮಾರಾಟ	550	800
342	ಪಡಿತರ ಸಾಮಾಗ್ರಿ ಮಾರಾಟ ಮತ್ತು ಜೀನಸಿ ಮಾರಾಟದ ಬಗ್ಗೆ	825	1000
343	ಯಂತ್ರದ ಬಿಡಿ ಭಾಗ ತಯಾರಿಕೆ	825	1000
344	ರೆಡಿಮೇಡ್ ಬಟ್ಟೆ ಮತ್ತು ಪಾದರಕ್ಷೆ ಮಾರಾಟ	1100	1300
345	ಪ್ಯಾಬ್ರಿಕೇಷನ್ ವರ್ಕ್ಸ್	825	1000
346	ಫೋಟೋ ಫ್ರೇಮ್ ಮತ್ತು ಗ್ಲಾಸ್ ವರ್ಕ್ ಹಾಗೂ ಗಿಫ್ಟ್ ಐಟಂಗಳ ಮಾರಾಟ	825	1000
347	ಅಟೋ ಮೊಬೈಲ್ ಸ್ಪೇರ್ಸ್	550	800
348	ಯುನಿಸೆಕ್ಸ್ ಸಲೂನ್	825	1000
349	Pizza Shop	825	1000
350	ಪೂಜಾ ಸಾಮಗ್ರಿ ಮಾರಾಟ	550	800
351	Auto Spares & Accessories	1100	1300
352	ಜ್ಯೂಸ್ ಮತ್ತು ಸ್ನ್ಯಾಕ್ಸ್ ಅಂಗಡಿ ನಡೆಸುವ ಬಗ್ಗೆ	825	1000
353	ಸ್ಟೀಲ್ ಇಂಜಿನೀಯರಿಂಗ್ & ಫೆಬ್ರಿಕೇಷನ್ ಇಂಡಸ್ಟ್ರೀಸ್	825	1000
354	ಪ್ಲಾಸ್ಟಿಕ್ ಸಾಮಾಗ್ರಿಗಳ ಗೋದಾಮು	1375	1550
355	ನಾಟಿ ವೈದ್ಯಕೀಯ ಕ್ಲಿನಿಕ್	1000	1200
356	ದಾಸ್ತಾನು ಗೋಡನು ಸಣ್ಣದು	825	1000
357	Dairy Products	1210	1350
358	ಗೇರು ಬೀಜ ಸಂಸ್ಕರಣಾ ಘಟಕ	1925	2100
359	ಎಲೆಕ್ಟ್ರೋನಿಕ್ & ಮೊಬೈಲ್ ಸೇಲ್ಸ್,ಸರ್ವಿಸ್	1650	1850
360	ಇಸ್ತ್ರಿ ಅಂಗಡಿ	550	800
361	ಮೊಬೈಲ್ ಶೋಪ್ ಮತ್ತು ಸ್ಟೇಷನರಿ	825	1000
362	Car accessories	825	1000
363	3 HP ಯಂತ್ರ ಬಳಸಿ ನೀರು ಎತ್ತುವ ಬಗ್ಗೆ	715	900
364	ಝರಾಕ್ಸ್ ಮತ್ತು ಸ್ಟೇಷನರಿ ಅಂಗಡಿ	825	1000
365	ವಾಚ್ ವರ್ಕ್ಸ್	550	800
366	ಗ್ಲಾಸ್ ಡಿಸೈನರ್	1375	1550
367	ಮ್ಯಾಚಿಂಗ್ ಸೆಂಟರ್	1100	1300

368	ಖಾಲಿ ಚೀಲ ವ್ಯಾಪಾರ	1000	1200
369	ಅಟೋ ಇಲೇಕ್ಟ್ರೀಕಲ್ ವರ್ಕ್ಸ್	825	1000
370	ಪ್ಲಾಸ್ಟಿಕ್ ಬಾಟಲಿ ಮತ್ತು ಕ್ಯಾನ್ ತಯಾರಿಕೆ	1925	2100
371	HARDWARE, PLYWOOD & PAINTING	2200	2350
372	ಫಾಸ್ಟ್ ಫುಡ್ ಕ್ಯಾಂಟೀನ್ (ಮಾಧ್ಯಮ)	1100	1300
373	ಇಂಜಿನಿಯರಿಂಗ್ ಸರ್ವಿಸಸ್	1500	1700
374	ಸರ್ವಿಸ್ ಸೆಂಟರ್	1100	1300
375	Fish Shop	825	1000
376	Property Development	880	1000
377	3 H.P ಅಳವಡಿಸಿ ಟೈಲ್ಸ್ ತಯಾರಿಕೆ	1650	1850
378	5 ಅಶ್ವಶಕ್ತಿ ಬಳಸಿ ಬೇಕರಿ	1160	1300
379	ಮೀನು ಎಣ್ಣೆ ಮಾರಾಟ	1650	1800
380	ಟಿಂಬರ್ಸ್ ಮಾರಾಟ	825	1000
381	ಇಂಜಿನಿಯರಿಂಗ್ ವರ್ಕ್ಸ್	825	1000
382	ಸಾವಯುವ ಗೊಬ್ಬರ ಮಾರಾಟ	825	1000
383	ಪತಂಜಲಿ ವಸ್ತುಗಳ ಮಾರಾಟದ ಬಗ್ಗೆ	550	800
384	20 ಅಶ್ವ ಶಕ್ತಿ ಬಳಸಿ ತೆಂಗಿನ ಎಣ್ಣೆ ಮಿಲ್ಲ್	2000	2200
385	Purchase and Sales of Clothes	825	1000
386	Yamaha Showroom	1375	1500
387	ನ್ಯಾಚುರಲ್ ಹೆಲ್ತ್ ಕೇರ್ & ವೆಲ್ ನೆಸ್ ಸೆಂಟರ್	1100	1250
388	ಮೊಬೈಲ್ ಸೇಲ್ಸ್	550	800
389	ಟ್ರೇಡಿಂಗ್	1100	1300
390	ರಕ್ತ ತಪಾಸಣಾ ಕೇಂದ್ರ	1210	1300
391	ಸಿಗಡಿ ಸಾಕಾಣಿಕೆ	3300	3400
392	ವಾಚ್ ರಿಪೇರಿ	550	800
393	ಇಲೆಕ್ಟ್ರೀಕಲ್ಸ್ & ಇಲೆಕ್ಟ್ರೋನಿಕ್ಸ್ ಅಂಗಡಿ	1650	1800
394	ಅಡಿಕೆ ಎಲೆ ಪ್ಲೇಟ್ ತಯಾರಿಕೆ ಅಂಗಡಿ	1500	1650
395	ಕೇಟರಿಂಗ ಉದ್ದಿಮೆ	1100	1300
396	Xerox, Online Applications and Stationary	825	1000
397	ತೂಕ ಮತ್ತು ಅಳತೆ ಸಾಮಗ್ರಿಗಳ ದುರಸ್ತಿದಾರರು	750	850
398	Computer Technology	825	1000
399	ವಿದ್ಯುತ್ ಉಪಕರಣಗಳ ರಿಪೇರಿ ಹಾಗೂ ಮಾರಾಟ	550	800
400	ಸ್ವದೇಶಿ ಉತ್ಪನ್ನಗಳ ಮಾರಾಟ	550	800
401	ಪ್ಲಾಸ್ಟಿಕ್ ಸ್ಟೀಲ್ ಅಲ್ಯೂಮಿನಿಯಂ ವಸ್ತುಗಳ ಮಾರಾಟ	550	800
402	ಕಟ್ಟಡ ಕಾಮಗಾರಿ ಸಾಮಾನು ದಾಸ್ತಾನು ಮತ್ತು ರಿಪೇರಿ	1100	1300
403	ಕಛೇರಿ	550	800
404	ಗೋಡಾನ್	1100	1300
405	ರೇಶನ್ ಅಂಗಡಿ	825	1000
406	ಜನರೇಟರ್ ಸೇಲ್ಸ್ & ಸರ್ವಿಸ್ ಹಾಗು ಬಾಡಿಗೆಗೆ	1100	1300
407	Online Services	825	1000
408	Franchise	825	1000
409	ADVERTISEMENT AGENCIES	550	800
410	Ice Cream Manufacturing (1 HP to 5 HP)	1650	1800
411	ಮರದ ಕೆಲಸ ಹಾಗೂ ಪೀಠೋಪಕರಣಗಳ ತಯಾರಿ	1650	1800
412	ಮೀಡಿಯಾ ಹೌಸ್	825	1000
413	ಕೋಲ್ಡ್ ಸ್ಟೋರೇಜ್	1100	1300
414	ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ	1250	1400
415	ಟೂರ್ಸ್ ಅಂಡ್ ಟ್ರಾವೆಲ್ಸ್	550	800
416	ತಂಪು ಪಾನೀಯ ತಯಾರಿಕ ಘಟಕ	1650	1800
417	Pet smart	825	1000
418	ಮೀನಿನ ವ್ಯಾಪಾರ ಕಚೇರಿ	825	1000
419	Glass Cutting - 06 HP - 10 HP	3030	3300
420	ಅರ್ಥ್ ಮೂವರ್ಸ್ ಕಛೇರಿ	1100	1300
421	Veg, Non-veg Hotel	1100	1300
422	Tissue Paper and Hygiene Product	1375	1500

423	Air Conditioner	1100	1200
424	Industrail Gas Stores	825	1000
425	ಇಲೆಕ್ಟ್ರೀಕಲ್ ಅಂಗಡಿ	550	800
426	ಮೀನು ಮತ್ತು ಏಡಿ ವ್ಯಾಪಾರ ದಾಸ್ತಾನು	1375	1500
427	Juice, ice cream parlour & refreshment	2000	2200
428	ಹರ್ಬಲ್ ಲೈಫ್ ನ್ಯೂಟ್ರಿಷನ್ ಪ್ರಾಡಕ್ಟ್ಸ ಸಪ್ಲೈಯಿಂಗ್ ಅಂಡ್ ರೀಟ	1500	1700
429	Tuition and computer institute	1100	1300
430	ಲೇಬರ್ ಮತ್ತು ಫ್ಯಾಬ್ರಿಕೇಷನ್ ವರ್ಕ್ಸ್	1100	1300
431	ಗ್ಯಾಸ್ ಡೀಲರ್	825	1000
432	ಫಿಟನೆಸ್ ಜಿಮ್	1000	1200
433	ಬೇಕರಿ ತಿಂಡಿ ತಯಾರಿಕೆ ಮತ್ತು ಮಾರಾಟ	1250	1400
434	ಪಿ.ಡಬ್ಲ್ಯೂ.ಡಿ ಗುತ್ತಿಗೆದಾರರ ಕಛೇರಿ	825	1000
435	Food Products & General Store Wholesale Distributor	825	1000
436	ಮಾಹಿತಿ ತಂತ್ರಜ್ಞಾನ	1100	1300
437	DISTRIBUTORS	825	1000
438	Electronics and Solar Power System	1650	1850
439	ಜನರಲ್ ಸ್ಟೋರ್ & ಬೇಕರಿ ತಯಾರಿ ಮತ್ತು ಮಾರಾಟ	2000	2200
440	ಕಂಟ್ರಾಕ್ಟುದಾರರ ಮೂಲಕ ಬಿಡಿ ತಯಾರಿಕೆ	1320	1500
441	ಮೊಬೈಲ್ ಸೇಲ್ಸ್ & ಸರ್ವಿಸಸ್ ಮತ್ತು ಎಲೆಕ್ಟ್ರಿಕಲ್ ಅಂಗಡಿ	825	1000
442	ಪ್ಲಾಸ್ಟಿಕ್ ರಿ-ಗ್ರ್ಯಾನಿಂಗ್ ಘಟಕ	2200	2350
443	Event Management	1650	1750
444	Waste Plastic Processing	1925	2150
445	Alluminium Works (16HP-20HP)	825	1000
446	Machine Works (11HP-15HP)	825	1000
447	ಮರಳು ವ್ಯಾಪಾರ	1375	1500
448	Cars Sales & Servicing (Show Room)	1375	1500
449	Cold Drinks Distributors	825	1000
450	ಮೇಣದ ಬತ್ತಿ, ಅರಗು ಸಗಟು ಮಾರಾಟ	825	1000
451	ರಬ್ಬರ್ ಅಥವಾ ರಬ್ಬರ್ ಸರಕುಗಳ ತಯಾರಿಕೆ ಮತ್ತು ಮಾರಾಟ	1100	1250
452	ಆಟೋಮೊಬೈಲ್ ಬಿಡಿಭಾಗಗಳ ತಯಾರಿಕೆ, ದಾಸ್ತಾನು ಮಾರಾಟ	1750	1950
453	Cloth Shop	825	1000
454	ಆಭರಣಗಳ ತಯಾರಿಕೆ	825	1000
455	ಸೇವಾ ಕೇಂದ್ರ	825	1000
456	ಸಿಮೆಂಟ್ ಪೈಪ್ ವ್ಯಾಪಾರ	1500	1650
457	ಮೆಡಿಕಲ್ಸ್ ಮತ್ತು ಸರ್ಜಿಕಲ್ಸ್	825	1000
458	ರಸಗೊಬ್ಬರ ಮತ್ತು ಕೀಟನಾಶಕಗಳ ಮಾರಾಟ	825	1000
459	Mobile Sales And Accessories	825	1000
460	Adventure Tour Operator & Sporting Goods Sale	1100	1250
461	ಹಣ್ಣು ಕಾಯಿ ಹೂ ವ್ಯಾಪಾರ	825	1000
462	Courier & Stationery	1100	1300
463	Paints and Hardware	825	1000
464	ಇಲೆಕ್ಟ್ರಿಕಲ್ ಸ್ಕೂಟರ್ ಸೇಲ್	1000	1100
465	ಕಲಾ ಸಾಮಾಗ್ರಿ ಬಾಡಿಗೆಗೆ	1375	1500
466	ಸಣ್ಣ ಕೈಗಾರಿಕೆ(ಚಿಕ್ಕದು).	1375	1500
467	Cleaning agency for Industrial and Domestic use.	825	1000
468	Ayurvedic Shop	825	1000
469	ಕ್ಲೀನಿಂಗ್ ಹಾಗೂ ಇತರೆ ಸಾಮಾಗ್ರಿ ಹೊಲ್ ಸೇಲ್ ಡಿಸ್ಟ್ರಿಬ್ಯೂಟರ್ ಉದ್ದಿಮೆ	825	1000

470	ಇಲೆಕ್ಟ್ರಿಕಲ್ಸ್ & ಸೌಂಡ್ ಸಿಸ್ಟಮ್	1000	1200
471	ಮರಳು ದಾಸ್ತಾನು	1375	1500

d) ಸೂಚನೆಗಳು :

i. ಬೈಲಾ ಅನುಮೋದನೆಗೊಂಡ ದಿನಾಂಕದಿಂದ **ಪ್ರತಿ ವರ್ಷಕೊಮ್ಮೆ ಉದ್ದಿಮೆ ಪರವಾನಿಗೆ ಶುಲ್ಕವನ್ನು ಶೇಕಡಾ 5% ಹೆಚ್ಚಿಸಲಾಗುವುದು.**

ii. ಸರ್ಕಾರದಿಂದ ಬರುವ ನಿರ್ದೇಶನ/ ಆದೇಶದಂತೆ ಮೇಲ್ಕಂಡ ಶುಲ್ಕವನ್ನು ಮರು ಪರಿಷ್ಕರಿಸುವ ಅಧಿಕಾರ ನಗರ ಪಂಚಾಯತ್‌ಗೆ ಇರುತ್ತದೆ.

iii. ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ಉದ್ಯಮಗಳಿಗೆ ಉದ್ದಿಮೆದಾರರು ಪರವಾನಿಗೆ ಪಡೆಯಲು ಅರ್ಜಿ ಸಲ್ಲಿಸಿದಲ್ಲಿ ಅಂಥಹ ಉದ್ದಿಮೆಗಳಿಗೆ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿ/ಆರೋಗ್ಯ ನಿರೀಕ್ಷಕರು ಪರಿಶೀಲಿಸಿ ಅಂತಹ ಉದ್ದಿಮೆಗಳಿಗೆ ತಮ್ಮ ವಿವೇಚಾನಾಧಿಕಾರ ಬಳಸಿ ಪ್ರತ್ಯೇಕ ಶುಲ್ಕ ನಿಗಧಿ ಪಡಿಸಿ ವಸೂಲಾತಿ ಪಡೆಯಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.

iv. ಯಾವುದೇ ಉದ್ದಿಮೆ ಪರವಾನಿಗೆಯ ಊರ್ಜಿತ ಅವಧಿಯು ಪ್ರತೀ ವರ್ಷದ ಮಾರ್ಚ್ ಅಂತ್ಯದವರೆಗೆ ಇರುತ್ತದೆ. ಅನಂತರ ನವೀಕರಣ ಮಾಡದೇ ಇದ್ದಲ್ಲಿ ಅಂತಹ ಉದ್ದಿಮೆ ಪರವಾನಿಗೆಗಳು ರದ್ದುಗೊಂಡಿದೆ ಎಂದು ತಿಳಿಯತಕ್ಕದ್ದು.

v. ಉದ್ಯಮ ಪರವಾನಿಗೆ ದಂಡ ರಹಿತವಾಗಿ ನವೀಕರಣಕ್ಕೆ ಅರ್ಜಿ ಸಲ್ಲಿಸಲು ಮೇ ತಿಂಗಳ ಅಂತ್ಯದವರೆಗೆ ಇರುತ್ತದೆ ಎಂದು ತಿಳಿಯತಕ್ಕದ್ದು.

vi. ಜೂನ್ ತಿಂಗಳಿನಿಂದ ಪ್ರತಿ ತಿಂಗಳಿಗೆ ಪರವಾನಿಗೆ ಶುಲ್ಕದ ಶೇ. 10 ರಂತೆ ಹೆಚ್ಚುವರಿ ಮೊತ್ತವನ್ನು ದಂಡದ ರೂಪದಲ್ಲಿ ಪಾವತಿಸಿ ನವೀಕರಿಸಿಕೊಳ್ಳತಕ್ಕದ್ದು.

vii. ಪರವಾನಿಗೆ ರದ್ದುಗೊಂಡ ನಂತರ ಉದ್ದಿಮೆದಾರರು ಹೊಸದಾಗಿ ದಾಖಲೆಗಳನ್ನು ಸಲ್ಲಿಸಿ ನಿಯಮಾನುಸಾರ ಶುಲ್ಕಗಳನ್ನು ಪಾವತಿಸಿ ಪರವಾನಿಗೆ ಪಡೆದುಕೊಳ್ಳತಕ್ಕದ್ದು ಎಂದು ತಿಳಿಯತಕ್ಕದ್ದು.

viii. ಉದ್ದಿಮೆ ಪರವಾನಿಗೆಯ ಪ್ರಮಾಣ ಪತ್ರ ನಮೂನೆಯಲ್ಲಿ ಕಾಣಿಸಲಾದ ಎಲ್ಲಾ ಶರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

ix. ವ್ಯಾಪಾರಸ್ಥರು ಅವರ ವ್ಯಾಪಾರ ಕೇಂದ್ರದಲ್ಲಿ ಅವರ ವ್ಯಾಪಾರಕ್ಕೆ ಸಂಬಂಧಿಸಿದಂತೆ 1 ನಾಮಫಲಕವನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಅಳವಡಿಸಲು ಯಾವುದೇ ನಾಮಫಲಕ ಯಾ ಜಾಹೀರಾತುಗಳಿಗೆ ಪ್ರತ್ಯೇಕ ಶುಲ್ಕ ಅನ್ವಯಿಸುತ್ತದೆ.

x. ಯಾವುದೇ ನಾಮಫಲಕ ಮತ್ತು ಜಾಹೀರಾತು ಫಲಕದಲ್ಲಿ ಕಡ್ಡಾಯವಾಗಿ ಕನ್ನಡವನ್ನು ಬಳಕೆ ಮಾಡತಕ್ಕದ್ದು.

xi. ಅರ್ಜಿದಾರರು ಗೃಹಬಳಕೆ/ ಮನೆ ಉತ್ಪನ್ನಗಳ/ಕಛೇರಿ ವ್ಯವಹಾರ ಅಥವಾ ಇತರೆ ಹಾನಿಯುಂಟು ಮಾಡದಂತಹ ಉದ್ದಿಮೆಯನ್ನು ವಸತಿ ಪ್ರದೇಶ/ ಕಟ್ಟಡದಲ್ಲಿ ನಡೆಸಲು ಅರ್ಜಿ ಸಲ್ಲಿಸಿದಲ್ಲಿ ನಗರ ಪಂಚಾಯತ್ ಈ ಬಗ್ಗೆ ಕೂಲಂಕೂಷವಾಗಿ ಪರಿಶೀಲಿಸಿ ಸಮಂಜಸವಿದ್ದಲ್ಲಿ ಮುಖ್ಯಾಧಿಕಾರಿ/ಆರೋಗ್ಯ ನಿರೀಕ್ಷಕರು ವಿವೇಚನೆ/ಅಧಿಕಾರ ವ್ಯಾಪ್ತಿಯಲ್ಲಿ ಷರತ್ತು ವಿಧಿಸಿ ದುಪ್ಪಟ್ಟು ಪರವಾನಿಗೆ ಶುಲ್ಕವನ್ನು ವಿಧಿಸಿ ತಾತ್ಕಾಲಿಕ ಪರವಾನಿಗೆಯನ್ನು ನೀಡಲು ಕ್ರಮವಹಿಸಬಹುದಾಗಿದೆ.

xii. ಅರ್ಜಿದಾರರು ಹೊಸ ಉದ್ದಿಮೆ ಪರವಾನಿಗೆಯನ್ನು ಪಡೆಯಲು ಪ್ರಸಕ್ತ ಸಾಲಿನ ಅಕ್ಟೋಬರ್ ಮಾಹೆಯೊಳಗೆ ಅರ್ಜಿ ಸಲ್ಲಿಸಿದಲ್ಲಿ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕದ ಪೂರ್ಣ ಮೊತ್ತವನ್ನು ಪಾವತಿಸುವುದು ಹಾಗೂ ಅಕ್ಟೋಬರ್ ಮಾಹೆಯ ನಂತರ ಮುಂದಿನ ಸಾಲಿನ ಮಾರ್ಚ್ ಮಾಹೆಯೊಳಗೆ ಅರ್ಜಿ ಸಲ್ಲಿಸಿದಲ್ಲಿ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕದ ಶೇಕಡಾ 50 ರಷ್ಟು ಮೊತ್ತವನ್ನು ಪಾವತಿಸಲು ಬದ್ದರಾಗಿರತಕ್ಕದ್ದು.

xiii. ಕಟ್ಟಡ ಸಂಖ್ಯೆಯಿಲ್ಲದ ಅಥವಾ ತೆರೆದ ಸ್ಥಳದಲ್ಲಿ ತಾತ್ಕಾಲಿಕ ಶೆಡ್/ಕಟ್ಟಡದಲ್ಲಿ ಅಥವಾ ತಾತ್ಕಾಲಿಕ ಕಟ್ಟಡ ಸಂಖ್ಯೆ ಹೊಂದಿದ ಕಟ್ಟಡದಲ್ಲಿ ಉದ್ದಿಮೆ ಪರವಾನಿಗೆಯನ್ನು ಪಡೆಯಲು ಇಚ್ಚಿಸಿದಲ್ಲಿ ನಗರ ಪಂಚಾಯತ್ ಈ ಬಗ್ಗೆ ಕೂಲಂಕೂಷವಾಗಿ ಪರಿಶೀಲಿಸಿ, ಮಹಜರ್ ತಯಾರಿಸಿ ಸಮಂಜಸವಿದ್ದಲ್ಲಿ

ಮುಖ್ಯಾಧಿಕಾರಿ/ ಆರೋಗ್ಯ ನಿರೀಕ್ಷಕರು ವಿವೇಚನೆ/ಅಧಿಕಾರ ವ್ಯಾಪ್ತಿಯಲ್ಲಿ ಷರತ್ತು ವಿಧಿಸಿ ದುಪ್ಪಟ್ಟು ಪರವಾನಿಗೆ ಶುಲ್ಕವನ್ನು ವಿಧಿಸಿ ತಾತ್ಕಾಲಿಕ ಪರವಾನಿಗೆಯನ್ನು ನೀಡಲು ಕ್ರಮ ವಹಿಸಬಹುದಾಗಿದೆ.

xiv. **ಕೆಲವು ಉದ್ದಿಮೆದಾರರು ಸಕ್ಷಮ ಪ್ರಾಧಿಕಾರದಿಂದ ಅನುಮತಿ/ಪರವಾನಿಗೆಯನ್ನು ಪಡೆಯುವ ಅವಶ್ಯಕತೆವಿರುವ ಸಂಧರ್ಭದಲ್ಲಿ ನಗರ ಪಂಚಾಯತ್ ಸದರಿ ಅರ್ಜಿದಾರರಿಂದ ಪ್ರಾರಂಭದಲ್ಲಿ ರೂ. 1000/- ನಿರಾಪೇಕ್ಷ ಶುಲ್ಕವನ್ನು ಪಾವತಿಸಿಕೊಂಡು ನಿರಾಪೇಕ್ಷಣಾ ಪತ್ರವನ್ನು ನೀಡುವುದು,** ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಹಾಜರು ಪಡಿಸಿದ ನಂತರ ನಿಯಮಾನುಸಾರ ಉದ್ದಿಮೆ ಪರವಾನಿಗೆಯನ್ನು ನೀಡಲು ಕ್ರಮ ವಹಿಸುವುದು .

xv. ಒಂದೊಮ್ಮೆ ಸರ್ಕಾರದ ನಿರ್ದೇಶನದಂತೆ ಉದ್ದಿಮೆದಾರರಿಗೆ ಉದ್ದಿಮೆ ಪರವಾನಿಗೆಗೆ ಪಡೆಯುವ ಬಗ್ಗೆ ವಿನಾಯಿತಿ ಇದ್ದಲ್ಲಿ ಸರ್ಕಾರದ ಸುತ್ತೂಲೆಯಲ್ಲಿನ ಅಂಶಗಳನ್ನು ಪರಿಶೀಲಿಸಿ ಅಂತಹಃ ಉದ್ದಿಮೆದಾರರಿಗೆ ಉದ್ದಿಮೆ ಪರವಾನಿಗೆಯನ್ನು ಪಡೆಯುವುದಕ್ಕೆ ವಿನಾಯಿತಿಯನ್ನು ನೀಡಲು ಕ್ರಮ ಕೈಗೊಳ್ಳುವುದು ಆದರೆ ಅದೇ ಉದ್ದಿಮೆದಾರರಿಂದ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕವನ್ನು ಪಡೆಯತಕ್ಕದ್ದು, ಇದರಲ್ಲಿ ವಿನಾಯಿತಿ ಇರುವುದಿಲ್ಲ ಎಂದು ತಿಳಿಯತಕ್ಕದ್ದು .

xvi. ಯಾವುದೇ ಉದ್ದಿಮೆದಾರರು ತಮ್ಮ ಉದ್ದಿಮೆ ಸ್ಥಳದಲ್ಲಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತಿದ್ದಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 164 ಜಿಇಎಲ್ 2013 ದಿನಾಂಕ: 19.05.2022 ರಂತೆ ಸರ್ಕಾರ ನಿಗಧಿಪಡಿಸಿದ ಶುಲ್ಕವನ್ನು ಪಾವತಿಸಿ ಪ್ರತ್ಯೇಕ ಪಾವಾನಿಗೆಯನ್ನು ನಗರ ಪಂಚಾಯತ್‌ನಿಂದ ಪಡೆದುಕೊಳ್ಳುವುದು ಹಾಗೂ The Karnataka Municipalities (Regulation and Inspection of places used for sale of Cigarettes and other tobacco products) Model Bye-Laws ರೀತ್ಯಾ ಕ್ರಮ ಕೈಗೊಳ್ಳುವುದು.

xvii. ಇತರೆ ವಿಶೇಷ ಸಂಧರ್ಭದಲ್ಲಿ ಮೇಲೆ ತಿಳಿಸಿರುವ ಅಂಶಗಳ ಹೊರತು ಪಡಿಸಿ ಉದ್ದಿಮೆ ಪರವಾನಿಗೆಗೆ ಅರ್ಜಿ ಸ್ವೀಕೃತವಾದಲ್ಲಿ ಮುಖ್ಯಾಧಿಕಾರಿಗಳು ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ನಿಯಮಾನುಸಾರ ಉದ್ದಿಮೆ ಪರವಾನಿಗೆಯನ್ನು ನೀಡಲು ಕ್ರಮ ವಹಿಸುವುದು.

xviii. ಉದ್ದಿಮೆ ಪರವಾನಿಗೆಯನ್ನು ಪಡೆದಿರುವ ಉದ್ದಿಮೆದಾರರು ಅನಿವಾರ್ಯವಾಗಿ ಉದ್ದಿಮೆಯನ್ನು ಸ್ಥಗಿತಗೊಳಿಸಬೇಕಾದ ಸಂಧರ್ಭದಲ್ಲಿ ಚಾಲ್ತಿಯಲ್ಲಿರುವ /ಹಿಂದಿನ ಪರವಾನಿಗೆಯನ್ನು ಕಡ್ಡಾಯವಾಗಿ ರದ್ದುಗೊಳಿಸಬೇಕಾಗಿರುತ್ತದೆ. ಈ ಜವಬ್ದಾರಿಯನ್ನು ಉದ್ದಿಮೆದಾರರು ಅಥವಾ ಕಟ್ಟಡ ಮಾಲಿಕರು ಹೊಂದಿರತಕ್ಕದ್ದು. ತಪ್ಪಿದಲ್ಲಿ ಮುಂದೆ ಹೊಸ ಪರವಾನಿಗೆ ಪಡೆಯಲು ಅರ್ಜಿ ಸಲ್ಲಿಸುವ ಸಂಧರ್ಭದಲ್ಲಿ ಹಿಂದಿನ ಸಾಲಿನ ಎಲ್ಲಾ ಅವಧಿಗೆ ನಿಗದಿತ ಪರವಾನಿಗೆ ಮತ್ತು ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕದ ಜೊತೆಗೆ ದಂಡನಾ ಶುಲ್ಕ (ಆಯಾಯ ಉದ್ದಿಮೆಯ ಪರವಾನಿಗೆ ಶುಲ್ಕ) ವನ್ನು ಪಾವತಿಸಿ ಹಿಂದಿನ ಪರವಾನಿಗೆಯನ್ನು ರದ್ದುಗೊಳಿಸಿದ ನಂತರ ಹೊಸ ಉದ್ದಿಮೆ ಪರವಾನಿಗೆಯನ್ನು ನೀಡಲು ಕ್ರಮ ವಹಿಸುವುದು.

xix. ಒಂದೊಮ್ಮೆ ಉದ್ದಿಮೆದಾರರು ಉದ್ದಿಮೆಯನ್ನು ಸ್ಥಗಿತಗೊಳಿಸಲು ಮರೆತು ಹೋಗಿ ಕೆಲವು ವರ್ಷಗಳಾಗಿದ್ದಲ್ಲಿ (ಮೂರು ವರ್ಷ ಮೇಲ್ಪಟ್ಟಿದಲ್ಲಿ) ಮತ್ತು ಸಕಾರಣವಿರುವ ಅಂತಹಃ ಸಂದರ್ಭದಲ್ಲಿ ನಗರ ಪಂಚಾಯತ್ ಈ ಬಗ್ಗೆ ಕೂಲಂಕೂಷವಾಗಿ ಪರಿಶೀಲಿಸಿ ಹಿಂದಿನ ಮೂರು ವರ್ಷಗಳ ನಿಗಧಿತ ಪರವಾನಿಗೆ ಮತ್ತು ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕದ ಜೊತೆಗೆ ದಂಡನಾ ಶುಲ್ಕ (ಆಯಾಯ ಉದ್ದಿಮೆಯ ಪರವಾನಿಗೆ ಶುಲ್ಕ) ವನ್ನು ಪಾವತಿಸಿಕೊಂಡು ಹಿಂದಿನ ಪರವಾನಿಗೆಯನ್ನು ರದ್ದುಗೊಳಿಸಿದ ನಂತರ ಹೊಸ ಉದ್ದಿಮೆ ಪರವಾನಿಗೆಯನ್ನು ನೀಡಲು ಕ್ರಮ ವಹಿಸುವುದು

xx. ಸರ್ಕಾರದ ಆದೇಶದಂತೆ ಉದ್ದಿಮೆದಾರರು ಪರವಾನಿಗೆಯನ್ನು 5 ವರ್ಷದ ತನಕದ ಅವಧಿಗೆ ಪಡೆಯಬಹುದು. ಆದರೆ ಒಂದೊಮ್ಮೆ ಪ್ರತಿ ವರ್ಷಕೊಮ್ಮೆ ಉದ್ದಿಮೆ ಪರವಾನಿಗೆ ಶುಲ್ಕವನ್ನು ಶೇಕಡಾ 5% ಹೆಚ್ಚಿಗೆಯಾದಲ್ಲಿ ಸದರಿ ವ್ಯತ್ಯಾಸ ಮೊತ್ತವನ್ನು ಪಾವತಿಸಲು ಉದ್ದಿಮೆದಾರರು ಬದ್ದರಾಗಿರತಕ್ಕದ್ದು .

xxi. ಉದ್ದಿಮೆದಾರರು ಹಲವು ವರ್ಗ/ವಿಧದ ಉದ್ದಿಮೆ ವ್ಯವಹಾರ ನಡೆಸಲು ಉದ್ದೇಶಿಸಿದಲ್ಲಿ ಅಂತಹಃ ಸಂಧರ್ಭದಲ್ಲಿ ಆರೋಗ್ಯ ನಿರೀಕ್ಷಕರು ಸ್ಥಳ ಪರಿಶೀಲಿಸಿ ಸದರಿ ಉದ್ದಿಮೆ ವರ್ಗಗಳ ಪೈಕಿ ಅನ್ವಯವಾಗುವ ಅತಿ ಹೆಚ್ಚು ಶುಲ್ಕದ ಮೊತ್ತವನ್ನು ಪರವಾನಿಗೆ ಮತ್ತು ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕವೆಂದು ಪರಿಗಣಿಸಿ ವಿಧಿಸತಕ್ಕದ್ದು.

xxii. ಉದ್ದಿಮೆದಾರರು ಉದ್ದಿಮೆಯ ಸ್ಥಳದ ಹೊರಭಾಗದಲ್ಲಿ ಹಸಿ ಮತ್ತು ಒಣ ತ್ಯಾಜ್ಯವನ್ನು ಶೇಖರಿಸಲು ಪ್ರತ್ಯೇಕ ಎರಡು ಬಿನ್ ಗಳನ್ನು (ಹಸಿ ತ್ಯಾಜ್ಯಕ್ಕೆ ಹಸಿರು ಬಣ್ಣ ಮತ್ತು ಒಣ ತ್ಯಾಜ್ಯಕ್ಕೆ ನೀಲಿ ಬಣ್ಣ) ಕಡ್ಡಾಯವಾಗಿ ಅಳವಡಿಸತಕ್ಕದ್ದು

xxiii. ಉದ್ದಿಮೆದಾರರು ಉದ್ದಿಮೆಯ ಸ್ಥಳದಲ್ಲಿ ಯಾವುದೇ ರೀತಿಯ ನಿಷೇಧಿತ ಪ್ಲಾಸ್ಟಿಕ್ ಬಳಕೆಯನ್ನು ಮಾಡತಕ್ಕದಲ್ಲ ಹಾಗೂ "ಈ ಅಂಗಡಿಯಲ್ಲಿ ಪ್ಲಾಸ್ಟಿಕ್ ಬಳಕೆ ಯನ್ನು ಸಂಪೂರ್ಣವಾಗಿ ನಿಷೇಧಿಸಿದೆ" ಎಂಬ ನಾಮಪಲಕವನ್ನು ಪ್ರದರ್ಶಿಸತಕ್ಕದ್ದು.

xxiv. ಕಾಲಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಶರ್ತಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

e) ದಂಡನೆಗಳು :

I. ಉದ್ದಿಮೆ ಪರವಾನಿಗೆದಾರರು ಈ ಮೇಲಿನ ಉಪವಿಧಿಯ ನಿಯಮಗಳನ್ನು ಉಲ್ಲಂಘಿಸಿ ವ್ಯವಹಾರ/ ವ್ಯಾಪಾರ/ ವಹಿವಾಟು ನಡೆಸಿದ್ದಲ್ಲಿ ಅಂತಹ ಪ್ರಕರಣಗಳಿಗೆ ಅನಧಿಕೃತವೆಂದು ಪರಿಗಣಿಸಿ ಸ್ಥಗಿತಗೊಳಿಸುವ ಅಥವಾ ಕಾಲಾವಕಾಶ ನೀಡಿ ನಿಯಮ ಪ್ರಕಾರ ನೋಟೀಸು ಜ್ಯಾರಿ ಗೊಳಿಸಿ ನಿಗಧಿತ ಶುಲ್ಕದೊಂದಿಗೆ ಹೆಚ್ಚುವರಿಯಾಗಿ ದುಪ್ಪಟ್ಟು ದಂಡ ವಿಧಿಸುವ ಹಕ್ಕು ನಗರ ಪಂಚಾಯತ್ ಗೆ ಇರುತ್ತದೆ ಎಂದು ತಿಳಿಯತಕ್ಕದ್ದು.

II. ದಂಡ ಪಾವತಿಸದೇ ಇದ್ದು ವ್ಯವಹಾರ/ವ್ಯಾಪಾರ/ಉದ್ದಿಮೆಯನ್ನು ಮುಂದುವರಿಸಿದಲ್ಲಿ ಅಂತಹವರ ಮೇಲೆ ಸ್ಥಳ ಮಹಜರು ಪಡಿಸಿ ಕಂದಾಯ ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ದಾವೆ ಹೂಡಲಾಗುತ್ತದೆ ಎಂದು ತಿಳಿಯತಕ್ಕದ್ದು. ಮತ್ತು ಘನ ನ್ಯಾಯಾಲಯದ ಆದೇಶದಂತೆ ನಡೆದುಕೊಳ್ಳತಕ್ಕದ್ದು.

III. ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಪ್ರಕರಣದ ತೀರ್ಪುಗೊಂಡು ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಲ್ಲಿ ಜಿಲ್ಲಾಧಿಕಾರಿಯವರ ನ್ಯಾಯಾಲಯದ ತೀರ್ಪು ಅಂತಿಮವಾಗಿರುತ್ತದೆ ಎಂದು ತಿಳಿಯತಕ್ಕದ್ದು.

f) ಉದ್ದಿಮೆ ಪರವಾನಿಗೆಯೊಂದಿಗೆ ಸಂಗ್ರಹಿಸಲಾಗುವ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕ.

ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಉದ್ದಿಮೆ ನಡೆಸುತ್ತಿರುವ ವ್ಯಾಪಾರಸ್ಥರಿಗೆ ಉದ್ದಿಮೆ ಪರವಾನಿಗೆ ಶುಲ್ಕದ ಜೊತೆಗೆ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕ ಸಂಗ್ರಹಿಸಲು **ಕೌನ್ಸಿಲ್ ನಿರ್ಣಯ ನಂಬ್ರ 95 ದಿನಾಂಕ 29.07.2009 ರಂದು** ಅನುಮೋದನೆಗೊಂಡಿರುತ್ತದೆ. ಆದರೆ ತದನಂತರ ಸುಮಾರು ವರ್ಷಗಳಿಂದ ಈಚೆಗೆ ಇಲ್ಲಿಯ ತನಕ ಘನತ್ಯಾಜ್ಯ ವಿಲೇವಾರಿ ಸೇವಾ ಶುಲ್ಕದ ದರ ಪರಿಷ್ಕರಣೆಗೊಂಡಿರುವುದಿಲ್ಲ .

ಘನತ್ಯಾಜ್ಯ ನಿರ್ವಹಣಾ ಸೇವಾ ಶುಲ್ಕವನ್ನು ಎಲ್ಲಾ ಉದ್ದಿಮೆಗಳಲ್ಲಿ ವಿವಿಧ ರೀತಿಯ ತ್ಯಾಜ್ಯ ಉತ್ಪತ್ತಿಯಾಗುವುದರಿಂದ ಪ್ರತಿ ಉದ್ದಿಮೆವಾರು ಘನತ್ಯಾಜ್ಯ ಉತ್ಪಾದನೆಗೆ ಅನುಗುಣವಾಗಿ ಪರಿಷ್ಕೃತ ಸೇವಾ ಶುಲ್ಕವನ್ನು ವಿಧಿಸುವುದು ಸೂಕ್ತವಾಗಿರುತ್ತದೆ.

ಈ ಹಿನ್ನೆಲೆ ಪೌರಾಡಳಿತ ನಿರ್ದೇಶನಾಲಯದಿಂದ ಜಾರಿಗೊಳಿಸಲಾದ ಮಾದರಿ ಬೈಲಾದಲ್ಲಿ ವಿವರಿಸಲಾದ ವಿವಿಧ ಉದ್ದಿಮೆಯ ವರ್ಗೀಕರಣ ಮತ್ತು ವಿಧಿಸಬಹುದಾದ ಕನಿಷ್ಠ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕ ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ವಿಧಿಸಿರುವ ಶುಲ್ಕ ಮತ್ತು ಉದ್ದಿಮೆ ವ್ಯಾಪಾರಗಳ ವರ್ಗೀಕರಣ ಇತ್ಯಾದಿ ಆಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ನಗರ ಪಂಚಾಯತ್‌ಗೆ ಹೆಚ್ಚಿನ ಆದಾಯ ಬರುವ ಹಿತದೃಷ್ಟಿಯೊಂದಿಗೆ ಈ ಹಿಂದೆ ವಿಧಿಸಲಾದ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕ ಮತ್ತು ಹೆಚ್ಚಿನ ಸಂಖ್ಯೆಯ ಉದ್ದಿಮೆಗಳ ವಿಧಗಳನ್ನು ಮರು ಪರಿಷ್ಕರಿಸಿ, ಘನತ್ಯಾಜ್ಯ ಉತ್ಪಾದನೆಯ ಆಧಾರದ ಅನುಗುಣವಾಗಿ ಪರಿಷ್ಕೃತ ಸೇವಾ ಶುಲ್ಕವನ್ನು ವಸತಿ ಮತ್ತು ವಾಣಿಜ್ಯ ಕಟ್ಟಡಗಳಿಗೆ ಪ್ರತ್ಯೇಕವಾಗಿ 2026-27ನೇ ಸಾಲಿನಿಂದ ಉದ್ದಿಮೆ ಪರವಾನಿಗೆ ಶುಲ್ಕದೊಂದಿಗೆ ಸಂಗ್ರಹಿಸುವ ಸಂಬಂಧ ಪರಿಷ್ಕೃತ ಶುಲ್ಕ ಮತ್ತು ಇತರೆ ವಿವರಗಳು ಈ ಕೆಳಗಿನಂತಿದೆ

ಕ್ರ. ಸಂ.	ಉದ್ದಿಮೆಯ ಸ್ವರೂಪ	ಪ್ರಸ್ತುತ ಘನತ್ಯಾಜ್ಯ ನಿರ್ವಹಣೆಯ ಸೇವಾ	ಘನತ್ಯಾಜ್ಯ ನಿರ್ವಹಣೆಯ ಸೇವಾ

		ಶುಲ್ಕ (ಮಾಸಿಕ)	ಶುಲ್ಕ (ಮಾಸಿಕ)
1	ಹೋಟೆಲ್ ಗಳು	50	300
2	ಕ್ಯಾಂಟೀನ್	50	150
3	ಬೇಕರಿ	50	150
4	ಟೀ / ಕಾಫಿ ಸ್ನಾಲ್ / ಸಿಹಿ ತಿಂಡಿ ಮಾರಾಟಗಾರರು	50	100
5	ಫಾಸ್ಟ್ ಫುಡ್ ಸ್ನಾಲ್	50	150
6	ಎಲ್ಲಾ ಮಾಂಸದ ಅಂಗಡಿ	50	100
7	ಚಪ್ಪಲಿ - ಶೂ ಮಾರಾಟ	50	100
8	ಬಟ್ಟೆ ಮಾರಾಟ	50	100
9	ಆಸ್ಪತ್ರೆ / ನರ್ಸಿಂಗ್ ಹೋಂ	50	150
10	ಕ್ಲಿನಿಕ್	50	100
11	ಮೆಡಿಕಲ್ ಶಾಪ್	50	150
12	ಹಾರ್ಡ್ವೇರ್ ಸ್ಟೋರ್	50	150
13	ಸರ್ವೀಸ್ ಸ್ಟೇಶನ್ / ಆಟೋ ಗ್ಯಾರೇಜ್	50	150
14	ಆಟೋ ಮೊಬೈಲ್ ಅಂಗಡಿ	50	150
15	ಹೂವಿನ ಅಂಗಡಿ	50	150
16	ಜನರಲ್ ಸ್ಟೋರ್	50	100
17	ಗಿರಣಿಗಳು	50	100
18	ಸಾಮಿಲ್	50	150
19	ಐಸ್ ಕ್ರೀಮ್ ಪಾರ್ಲರ್ / ಜ್ಯೂಸ್ ಸೆಂಟರ್	50	100
20	ಗೋದಾಮು	50	150
21	ಸಣ್ಣ ಮತ್ತು ಗುಡಿ ಕೈಗಾರಿಕೆಗಳು	50	150
22	ಇತರ ಉದ್ದಿಮೆ	50	100
23	ವೈನ್ / ಲಿಕ್ಕರ್ ಶಾಪ್	50	300
24	ಬಟ್ಟೆ ಮಾರಾಟ (Show Room)	50	300
25	ವಾಹನ ಶೋ ರೂಂ	50	300
26	ತರಕಾರಿ ಅಂಗಡಿ	50	300
27	ಹಣ್ಣಿನ ಅಂಗಡಿ	50	300
28	ಸೂಪರ್ ಮಾರ್ಕೆಟ್ ಗಳು	50	300

ಕ್ರ. ಸಂ.	ಬೃಹತ್ ತ್ಯಾಜ್ಯ ಉತ್ಪಾದಕರು	ಪ್ರಸ್ತುತ ಘನತ್ಯಾಜ್ಯ ನಿರ್ವಹಣೆಯ ಸೇವಾ ಶುಲ್ಕ (ಮಾಸಿಕ)	ಘನತ್ಯಾಜ್ಯ ನಿರ್ವಹಣೆಯ ಸೇವಾ ಶುಲ್ಕ (ಮಾಸಿಕ)
1	ವಸತಿಗೃಹ	600	600
2	ಬಾರ್ & ರೆಸ್ಟೋರೆಂಟ್	250	600
3	ಕಲ್ಯಾಣ ಮಂಟಪ/Convention Hall	250	600

g) ಸೂಚನೆಗಳು :

i. ಮುಲ್ಕಿ ನಗರ ಪಂಚಾಯತ್ ನ ಘನತ್ಯಾಜ್ಯ ನಿರ್ವಹಣೆಯ ಸೇವಾ ಶುಲ್ಕವನ್ನು **ಪ್ರತಿ ವರ್ಷಕ್ಕೊಮ್ಮೆ ಕನಿಷ್ಠ ಶೇ. 5% ರಷ್ಟು ಹೆಚ್ಚಳಗೊಳಿಸುವುದು.**

ii. ಮೇಲ್ಕಂಡ ಕೋಷ್ಟಕದಲ್ಲಿ ಕಂಡು ಬರದ ಉದ್ದಿಮೆಗಳಿಗೆ ಘನತ್ಯಾಜ್ಯ ನಿರ್ವಹಣೆಯ ಸೇವಾ ಶುಲ್ಕವನ್ನು ಪರಿಶೀಲಿಸಿ ವಿಧಿಸುವ ಅಧಿಕಾರವನ್ನು ಮುಖ್ಯಾಧಿಕಾರಿ ಅಥವಾ ಅವರಿಂದ ಅಧಿಕಾರ ಪಡೆದವರು ದರ ವಿಧಿಸಲು ಕ್ರಮ ವಹಿಸುವುದು.

iii. ನಿಗಧಿತ ಅವಧಿಯೊಳಗೆ ಪರವಾನಗಿಯನ್ನು ನವೀಕರಣಗೊಳಿಸುವ ಮತ್ತು ಹೊಸದಾಗಿ ಪರವಾನಗಿಯನ್ನು ಪಡೆಯುವ ಸಂಧರ್ಭದಲ್ಲಿ **ಕಡ್ಡಾಯವಾಗಿ ಸೇವಾ ಶುಲ್ಕವನ್ನು ಪಾವತಿಸುವುದು**

iv. ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು

h) ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕ ವಸೂಲಾತಿ ಮಾಡುವ ವಿಧಾನ

ಕ್ರ. ಸಂ.	ಕಟ್ಟಡದ ವಿಧ	ಘನತ್ಯಾಜ್ಯ ನಿರ್ವಹಣಾ ಸೇವಾ ಶುಲ್ಕ ವಸೂಲಾತಿ ವಿಧಾನ	ಷರಾ
1.	ವಸತಿ	ಆಸ್ತಿ ತೆರಿಗೆಯೊಂದಿಗೆ	ಸ್ವಂತ/ಬಾಡಿಗೆ ವಾಸದ ಮನೆಗಳು
2.	ವಾಣಿಜ್ಯ	ಉದ್ದಿಮೆ ಪರವಾನಗಿ ಶುಲ್ಕದೊಂದಿಗೆ	ಉದ್ದಿಮೆ ಪರವಾನಗಿ ಹೊಂದಿರುವ ವಸತಿಯೇತರ ಕಟ್ಟಡಗಳು

i) ವಸತಿ ಕಟ್ಟಡಗಳಿಗೆ :

ಕ್ರ. ಸಂ	**ಕಟ್ಟಡದ ವಿಸ್ತೀರ್ಣ**	**ಪ್ರಸ್ತುತ ಸಂಗ್ರಹಿಸುತ್ತಿರುವ ಸೇವಾ ಶುಲ್ಕ**		**ಪರಿಷ್ಕೃತ ದರ**	
		ಮಾಸಿಕ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕ	ವಾರ್ಷಿಕ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕ	ಮಾಸಿಕ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕ	ಸಮಿತಿ ಶಿಫಾರಸು ಪಡಿಸಿದ ವಾರ್ಷಿಕ ಘನತ್ಯಾಜ್ಯ ನಿರ್ವಹಣೆ ಪರಿಷ್ಕೃತ ಸೇವಾ ಶುಲ್ಕ
1.	500 ಚ. ಅಡಿಗಿಂತ ಕಡಿಮೆ ಇದ್ದಲ್ಲಿ	ರೂ. 25/-	ರೂ. 300/-	ರೂ. 35/-	ರೂ. 420/-
2.	500 ಚ. ಅಡಿಯಿಂದ 1000 ಚ. ಅಡಿ ವರೆಗೆ	ರೂ. 25/-	ರೂ. 300/-	ರೂ. 45/-	ರೂ. 540/-
3.	1000 ರಿಂದ 2000 ಚ. ಅಡಿ ವರೆಗೆ	ರೂ. 25/-	ರೂ. 300/-	ರೂ. 55/-	ರೂ. 660/-
4.	2000 ರಿಂದ 3000 ಚ. ಅಡಿ ವರೆಗೆ	ರೂ. 25/-	ರೂ. 300/-	ರೂ. 65/-	ರೂ. 780/-
5	3000 ಚ. ಅಡಿಗಿಂತ ಹೆಚ್ಚಿದ್ದರೆ	ರೂ. 25/-	ರೂ. 300/-	ರೂ. 70/-	ರೂ. 840/-

j) ಸೂಚನೆಗಳು :

i. ಮುಲ್ಕಿ ನಗರ ಪಂಚಾಯತ್ ನ ಘನತ್ಯಾಜ್ಯ ನಿರ್ವಹಣೆಯ ಸೇವಾ ಶುಲ್ಕವನ್ನು ಪ್ರತಿ ವರ್ಷಕ್ಕೊಮ್ಮೆ ಕನಿಷ್ಠ ಶೇ. 5% ರಷ್ಟು ಹೆಚ್ಚಳಗೊಳಿಸುವುದು.

ii. ಆಸ್ತಿ ತೆರಿಗೆ ಪಾವತಿಯೊಂದಿಗೆ ಕಡ್ಡಾಯವಾಗಿ ಘನತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕವನ್ನು ಪಾವತಿಸುವುದು.

iii. ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

k) ವಿವಿಧ ಚಟುವಟಿಕೆ/ಸೇವೆಗಳಿಗೆ ಮತ್ತು ತ್ಯಾಜ್ಯೋತ್ಪಾದಕನಿಂದ ಸಂಗ್ರಹಿಸಬಹುದಾದ ಘನ ತ್ಯಾಜ್ಯ ನಿರ್ವಹಣೆಯ ಮತ್ತು ಇತರೆ ಸೇವಾಶುಲ್ಕ

ಕ್ರ. ಸಂ.	ವಿವಿಧ ಸೇವೆಗಳ ಮತ್ತು ತ್ಯಾಜ್ಯೋತ್ಪಾದನೆಯ ಮಾದರಿ ವಿವರ	ಸಂಗ್ರಹಿಸಬೇಕಾದ ಘನ ತ್ಯಾಜ್ಯ ನಿರ್ವಹಣೆಯ ಮತ್ತು ಇತರೆ ಸೇವಾಶುಲ್ಕ
1	ಸಾರ್ವಜನಿಕ ಸ್ಥಳಗಳಲ್ಲಿ (ಒಂದು ಬಾರಿಗೆ) ಸಮಾರಂಭಗಳು ಮತ್ತು ಕೂಟಗಳ ಸಂಬಂಧ ಮರುಪಾವತಿಸಬಹುದಾದ ಸ್ವಚ್ಛತಾ ಠೇವಣಿ (ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳನ್ನು ಹೊರತುಪಡಿಸಿ)	
	ಅ) 0 ರಿಂದ 100 ಜನ ಸಂದಣಿ	₹ 500
	ಆ) 100 ರಿಂದ 1000 ಜನ ಸಂದಣಿ	₹ 2,000
	ಇ) 1001 ರಿಂದ 10,000 ಜನ ಸಂದಣಿ	₹ 4,000
	ಈ) 10,000 ಕ್ಕಿಂತ ಹೆಚ್ಚಿನ ಜನ ಸಂದಣಿ	₹ 17,500
2	ಸಾರ್ವಜನಿಕ ಸ್ಥಳಗಳಲ್ಲಿ (ಒಂದು ಬಾರಿಗೆ) ಆಯೋಜಿಸಲಾಗುವ ಸಮಾರಂಭ ಮತ್ತು ಕೂಟಗಳಲ್ಲಿ ಉತ್ಪಾದನೆಯಾದ ಘನತ್ಯಾಜ್ಯದ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ ಸೇವಾ ಶುಲ್ಕ (ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳನ್ನು ಹೊರತುಪಡಿಸಿ)	
	ಅ) 0 ರಿಂದ 100 ಜನ ಸಂದಣಿ	₹ 500
	ಆ) 100 ರಿಂದ 1000 ಜನ ಸಂದಣಿ	₹ 2000
	ಇ) 1001 ರಿಂದ 10,000 ಜನ ಸಂದಣಿ	₹ 4000
	ಈ) 10,000 ಕ್ಕಿಂತ ಹೆಚ್ಚಿನ ಜನ ಸಂದಣಿ	₹ 8,000
3	ನಗರ ಸ್ಥಳೀಯ ಸಂಸ್ಥೆಯಿಂದ ಹೊರತು ಪಡಿಸಿದ ಪ್ರದೇಶ ಅಂದರೆ ಬಂದರು ಪ್ರಾಧಿಕಾರ, ವಿಶೇಷ ಆರ್ಥಿಕ ವಲಯ, ಕಂಟೋನ್‌ಮೆಂಟ್, ರೈಲ್ವೇ ಇಲಾಖೆ, ಇತರೆ ಕ್ವಾರಿ ಇಲಾಖೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಸರ್ಕಾರಿ/ಅರೆ ಸರ್ಕಾರಿ ಮತ್ತು ಇತರೆ ಸರ್ಕಾರಿ ಸಾಮ್ಯತೆಯ ಇಲಾಖೆ ಇತ್ಯಾದಿಗಳಲ್ಲಿ ಉತ್ಪಾದನೆಯಾದ ಘನತ್ಯಾಜ್ಯಕ್ಕೆ ಸಂಸ್ಕರಣೆ ಹಾಗು ವಿಲೇವಾರಿ ಶುಲ್ಕ (ಮಾಸಿಕ ಶುಲ್ಕ ಆದಾರದಲ್ಲಿ)	ಮಾಸಿಕ ರೂ. 100/- ರಂತೆ
4	ಮರುಪಾವತಿಸಬಹುದಾದ ಸ್ವಚ್ಛತಾ ಠೇವಣಿ ((Refundable cleanliness Deposit)) ಸಾರ್ವಜನಿಕ ಕೂಟಗಳು ಮತ್ತು ಸಮಾರಂಭಗಳ ಆಯೋಜಕರು ಕಾರ್ಯಕ್ರಮದ ಅವಧಿಗೆ ಸಂಬಂಧಪಟ್ಟ ಕಛೇರಿಯಲ್ಲಿ ಅಗತ್ಯ ಪಡಿಸಿರುವ ಮುಂಗಡವನ್ನು ಠೇವಣಿ ಇರಿಸತಕ್ಕದ್ದು ಮತ್ತು ಅಂತಹ ಸಾರ್ವಜನಿಕ ಕೂಟಗಳು ಮುಕ್ತಾಯವಾದ ನಂತರ ಅಂತಹ ಸಾರ್ವಜನಿಕ ಸ್ಥಳದ ಸ್ವಚ್ಛತೆಯನ್ನು ಮರುಸ್ಥಾಪಿಸಲಾಗಿದೆಯೆಂದು ಘೋಷಿಸಿದ ತರುವಾಯ ಮತ್ತು ಈ ಕೂಟಗಳು ಮತ್ತು ಸಮಾರಂಭಗಳ ಕಾರಣದಿಂದಾಗಿ ಉತ್ಪತ್ತಿಯಾದಂತಹ ಘನತ್ಯಾಜ್ಯವನ್ನು ಸಂಬಂಧ ಪಟ್ಟ ಅಧಿಕಾರಿ/ ಪ್ರಾಧಿಕಾರವು ಬೇರ್ಪಡಿಸಿ, ಸಂಗ್ರಹಿಸಿ ಮತ್ತು ನಿಗದಿತ ಸ್ಥಳಕ್ಕೆ ಈ ಉಪನಿಯಮಗಳ ಉಪಬಂಧಗಳಡಿಯಲ್ಲಿ ಸಾಗಣೆ ಮಾಡಿದ ತರುವಾಯ ಅಂತಹ ಮುಂಗಡ ಠೇವಣಿಯು ಮರು ಪಾವತಿಸಲ್ಪಡತಕ್ಕದ್ದು. ಅಂತಹ ಕೂಟವು ಮುಕ್ತಾಯವಾದ 24 ಗಂಟೆಯ ಅವಧಿಯೊಳಗೆ ಅಂತಹ ಸಾರ್ವಜನಿಕ ಸ್ಥಳದ ಸ್ವಚ್ಛತೆಯನ್ನು ಮರುಸ್ಥಾಪಿಸದ ಸಂದರ್ಭದಲ್ಲಿ, ನಗರ	ಕ್ರಮ ಸಂಖ್ಯೆ 1 ರಂತೆ ಪಾವತಿಸಿದ ಸ್ವಚ್ಛತಾ ಠೇವಣಿ

	ಸ್ಥಳೀಯ ಸಂಸ್ಥೆಗೆ ಸಂದಾಯ ಮಾಡಿದಂತಹ ಸ್ವಚ್ಛತಾ ಶೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು	
7	ಗಾರ್ಡನ್/ ಪಾರ್ಕ್/ ಧಾರ್ಮಿಕ ಸ್ಥಳ/ ಸಂಸ್ಥೆ ,ಖಾಸಗಿ ಸ್ಥಳಗಳ , ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆ (ಮುಲ್ಕಿ ನಗರ ಪಂಚಾಯತ್ ವಾಹನ)	➢ 2 ಟನ್ ಕಡಿಮೆ ಸಾಮರ್ಥ್ಯದ ಟಿಪ್ಪರ್ : ರೂ 1500/ ಟ್ರಿಪ್ ➢ 2 ಟನ್ ಹೆಚ್ಚು ಸಾಮರ್ಥ್ಯದ ಟಿಪ್ಪರ್ : ರೂ 3000/ ಟ್ರಿಪ್
8	ಗಾರ್ಡನ್/ ಪಾರ್ಕ್/ ಧಾರ್ಮಿಕ ಸ್ಥಳ/ ಸಂಸ್ಥೆ ,ಖಾಸಗಿ ಸ್ಥಳಗಳ , ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆ (ಖಾಸಗಿ ವಾಹನ)	➢ 2 ಟನ್ ಕಡಿಮೆ ಸಾಮರ್ಥ್ಯದ ಟಿಪ್ಪರ್ : ರೂ 500/ ಟ್ರಿಪ್ ➢ 2 ಟನ್ ಹೆಚ್ಚು ಸಾಮರ್ಥ್ಯದ ಟಿಪ್ಪರ್ : ರೂ 1000/ ಟ್ರಿಪ್
9	ಹೊರಭಾಗದ ಸರ್ಕಾರಿ/ಅರೆ ಸರ್ಕಾರಿ ಮತ್ತು ಇತರೆ ಸರ್ಕಾರಿ ಸಾಮ್ಯಯ ಇಲಾಖೆ ಸಂಸ್ಥೆಗಳ ಹಸಿ ತ್ಯಾಜ್ಯ ಪಡೆದು ನಗರ ಪಂಚಾಯತ್ ನಿಂದ ಸಂಸ್ಕರಣೆ (ಖಾಸಗಿ ವಾಹನ)	ರೂ 500/ ಟನ್
10	ಹೊರಭಾಗದ ಸರ್ಕಾರಿ/ಅರೆ ಸರ್ಕಾರಿ ಮತ್ತು ಇತರೆ ಸರ್ಕಾರಿ ಸಾಮ್ಯಯ ಇಲಾಖೆ ಸಂಸ್ಥೆಗಳ ಒಣ/ಇತರೆ ತ್ಯಾಜ್ಯ ಪಡೆದು ನಗರ ಪಂಚಾಯತ್ ನಿಂದ ಸಂಸ್ಕರಣೆ (ಖಾಸಗಿ ವಾಹನ)	ರೂ 1000/ ಟನ್
11	ಹೊರಭಾಗದ ಸರ್ಕಾರಿ/ಅರೆ ಸರ್ಕಾರಿ ಮತ್ತು ಇತರೆ ಸರ್ಕಾರಿ ಸಾಮ್ಯಯ ಇಲಾಖೆ ಸಂಸ್ಥೆಗಳ ಮಿಶ್ರಿತ ತ್ಯಾಜ್ಯ ಪಡೆದು ಮುಲ್ಕಿ ನಗರ ಪಂಚಾಯತ್ ನಿಂದ ಸಂಸ್ಕರಣೆ (ಖಾಸಗಿ ವಾಹನ)	ರೂ 3000/ ಟನ್
12	ಹೊರಭಾಗದ ಸರ್ಕಾರಿ/ಅರೆ ಸರ್ಕಾರಿ ಸಂಸ್ಥೆಗಳ ಹಸಿ/ಒಣ ತ್ಯಾಜ್ಯದ ಸಂಗ್ರಹಣೆ ಸಾಗಣೆ ಮತ್ತು ಪಂಚಾಯತ್ ನಿಂದ ಸಂಸ್ಕರಣೆ	ರೂ 2000/ಟನ್ (10ಕಿಮಿ ತನಕ) ನಂತರ ಪ್ರತಿ ಕಿ ಮಿ ಗೆ ರೂ 50 ಹೆಚ್ಚುವರಿ

I) ಸೂಚನೆಗಳು :

i) ಬೈಲಾ ಅನುಮೋದನೆಗೊಂಡ ದಿನಾಂಕದಿಂದ ಪ್ರತಿ ವರ್ಷಕೊಮ್ಮೆ ಸೇವಾ ಶುಲ್ಕವನ್ನು ಶೇಕಡಾ 5% ಹೆಚ್ಚಿಸಲಾಗುವುದು.

ii) ಸರ್ಕಾರದಿಂದ ಬರುವ ನಿರ್ದೇಶನ/ ಆದೇಶದಂತೆ ಮೇಲ್ಕಂಡ ಶುಲ್ಕವನ್ನು ಮರು ಪರಿಷ್ಕರಿಸುವ ಅಧಿಕಾರ ನಗರ ಪಂಚಾಯತ್‌ಗೆ ಇರುತ್ತದೆ

iii) ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ಸೇವೆಗಳಿಗೆ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಪರಿಶೀಲಿಸಿ ತಮ್ಮ ವಿವೇಚನಾಧಿಕಾರ ಬಳಸಿ ಶುಲ್ಕ ನಿಗದಿ ಪಡಿಸಿ, ವಸೂಲಾತಿ ಮಾಡಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.

iv) ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು

m) ಬೃಹತ್ ತ್ಯಾಜ್ಯೋತ್ಪಾದಕರಿಂದ ಸಂಗ್ರಹಿಸಬಹುದಾದ ಘನ ತ್ಯಾಜ್ಯ ನಿರ್ವಹಣೆಯ ಶುಲ್ಕ ತಮ್ಮ ಆವರಣಗಳಲ್ಲಿ ತಮ್ಮದೇ ಆದ ಘನತ್ಯಾಜ್ಯವನ್ನು ಸಂಸ್ಕರಣೆ ಮಾಡಲಾರದಂತಹ ಅಥವಾ ಘನತ್ಯಾಜ್ಯ ನಿರ್ವಹಣಾ ಸೇವೆಗಳಿಗಾಗಿ ಪಟ್ಟಿಯಲ್ಲಿರುವ ಸೇವಾದಾರರನ್ನು ನೇಮಕ ಮಾಡಿಕೊಳ್ಳಲಾರದಂತಹ ಬೃಹತ್

ತ್ಯಾಜ್ಯೋತ್ಪಾದಕರುಗಳು ಸಂದಾಯ ಮಾಡಬೇಕಾದ ಎಸ್‌ಡಬ್ಲ್ಯೂಎಂ ಸೇವಾ ಶುಲ್ಕವು ಕೆಳಕಂಡಂತಿರತಕ್ಕದ್ದು.

ಕ್ರ. ಸಂ.	ವಿವಧ ಸೇವೆಗಳ ವಿವರ	ಪ್ರತಿಯೊಬ್ಬ ಬೃಹತ್ ಘನತ್ಯಾಜ್ಯೋತ್ಪಾದಕನು ಪ್ರತಿ ತಿಂಗಳು ಸಂದಾಯ ಮಾಡಬೇಕಾದ ಶುಲ್ಕವು ಕೆಳಗೆ ವಿಧಿಸಿದಕ್ಕಿಂತ ಕಡಿಮೆ ಇರತಕ್ಕದ್ದಲ್ಲ.
1	ಕೊಳೆಯಬಹುದಾದ ಜೈವಿಕ ತ್ಯಾಜ್ಯ, ಕೊಳೆಯಲಾದರ ಜೈವಿಕರಹಿತ ತ್ಯಾಜ್ಯ, ಗೃಹೋತ್ಪಾದಿತ ಹಾನಿಕಾರಕ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ ಮತ್ತು ಇ-ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ	600/-
2	ಕೊಳೆಯಬಹುದಾದ ಜೈವಿಕ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ	580/-
3	ಕೊಳೆಯಲಾರದ ಜೈವಿಕ ರಹಿತ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ	540/-
4	ಗೃಹೋತ್ಪಾದಿತ ಹಾನಿಕಾರಕ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ	400/-

n) ಸೂಚನೆಗಳು :

i) ಬೈಲಾ ಅನುಮೋದನೆಗೊಂಡ ದಿನಾಂಕದಿಂದ **ಪ್ರತಿ ವರ್ಷಕೊಮ್ಮೆ ಸೇವಾ ಶುಲ್ಕವನ್ನು ಶೇಕಡಾ 5% ಹೆಚ್ಚಿಸಲಾಗುವುದು.**

ii) ಸರ್ಕಾರದಿಂದ ಬರುವ ನಿರ್ದೇಶನ/ ಆದೇಶದಂತೆ ಮೇಲ್ಕಂಡ ಶುಲ್ಕವನ್ನು ಮರು ಪರಿಷ್ಕರಿಸುವ ಅಧಿಕಾರ ನಗರ ಪಂಚಾಯತ್‌ಗೆ ಇರುತ್ತದೆ

iii) ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ಸೇವೆಗಳಿಗೆ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಪರಿಶೀಲಿಸಿ ತಮ್ಮ ವಿವೇಚನಾಧಿಕಾರ ಬಳಸಿ ಶುಲ್ಕ ನಿಗದಿ ಪಡಿಸಿ, ವಸೂಲಾತಿ ಮಾಡಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.

iv) ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು

o) ದಂಡನೆಗಳು :

ಕ್ರ. ಸಂ.	ವಿವರ	ದಂಡ/ಜುಲ್ಮಾನೆಯು ಮೊದಲನೆ ಅಪರಾಧಕ್ಕೆ (ಕನಿಷ್ಠ ಶುಲ್ಕ)	ಎರಡನೆ ಮತ್ತು ನಂತರದ ಅಪರಾಧಕ್ಕೆ ದಂಡ (ಕನಿಷ್ಠ ಶುಲ್ಕ)
1	ಅನಧಿಕೃತ ಕಾರ್ಯಕ್ರಮ (ನಗರ ಪಂಚಾಯತ್ ಅನುಮತಿ ಪಡೆಯದೆ ಕಾರ್ಯಕ್ರಮ ನಡೆಸುವುದು)	ರೂ. 500/-	ರೂ. 1000/-
2	ತ್ಯಾಜ್ಯ ನೀರನ್ನು ಸಾರ್ವಜನಿಕ ಚರಂಡಿಗೆ ಬಿಡುವುದು	ರೂ. 500/-	ರೂ. 1000/-
3	ಅನಧಿಕೃತ ಜಾಹೀರಾತು ಫಲಕ/ ಬ್ಯಾನರ್/ ಕಟೌಟ್/ ಫ್ಲೆಕ್ಸ್/ ಬಾವುಟ ಅಳವಡಿಕೆ	ರೂ. 500/-	ರೂ. 1000/-
4	ಉಗುಳುವುದು, ಸ್ನಾನ ಮಾಡುವುದು, ಮೂತ್ರವಿಸರ್ಜನೆ ಮತ್ತು ಮುಕ್ತ ಸ್ಥಳದಲ್ಲಿ ಮಲವಿಸರ್ಜನೆ ಮಾಡಿ ಸಾರ್ವಜನಿಕ ಪೀಡನೆಯನ್ನುಂಟು ಮಾಡುವುದು	ರೂ. 150/-	ರೂ. 500
5	ಕಸವನ್ನು ರಸ್ತೆಯಲ್ಲಿ/ ಹೈವೇ/ ನದಿ/ ಚರಂಡಿಗಳಲ್ಲಿ/ ಸರ್ಕಾರಿ ಜಾಗದಲ್ಲಿ/ ಸಾರ್ವಜನಿಕ ಸ್ಥಳಗಳಲ್ಲಿ ಎಸೆಯುವುದು	ರೂ. 500/-	ರೂ. 2000/-

6	ಪ್ಲಾಸ್ಟಿಕ್ ಸುಡುವುದು, ಮರದ ಎಲೆಗಳನ್ನು ಸುಡುವುದು	ರೂ. 500/-	ರೂ. 2000/-
7	ಸಾರ್ವಜನಿಕರಿಗೆ ಉಪಹಾರ ನೀಡುವ ಯಾವುದೇ ಸ್ಥಳಗಳಲ್ಲಿ ಶುಚಿತ್ವ ಕಾಪಾಡಿಕೊಳ್ಳದೇ ಇರುವುದು	ರೂ. 500/-	ರೂ. 2000/-
8	ಈ ಉಪನಿಯಮಗಳ ಅಡಿಯಲ್ಲಿ ಬೃಹತ್ ಘನತ್ಯಾಜ್ಯ ಉತ್ಪಾದಕರಿಂದ ಘನತ್ಯಾಜ್ಯದ ವಿಂಗಡಣೆಯನ್ನು ಮಾಡಲು ವೈಫಲ್ಯ	ರೂ. 1000/-	ರೂ. 2000/-
9	ಈ ಉಪನಿಯಮಗಳಡಿಯಲ್ಲಿ ಬೃಹತ್ ತ್ಯಾಜ್ಯ ಉತ್ಪಾದಕರಲ್ಲದ ತ್ಯಾಜ್ಯ ಉತ್ಪಾದಕರುಗಳಿಂದ ತ್ಯಾಜ್ಯಗಳನ್ನು ವಿಂಗಡಣೆ ಮಾಡದ/ ಅಥವಾ ಹಸ್ತಾಂತರ ಮಾಡಲು ವಿಫಲತೆ	ರೂ. 500/-	ರೂ. 1000/-
10	ಸಿ ಅಂಡ್ ಡಿ ತ್ಯಾಜ್ಯವನ್ನು ವಿಂಗಡಿಸಿ ಹಸ್ತಾಂತರಿಸಲು ವಿಫಲರಾದ ಸಂದರ್ಭದಲ್ಲಿ ಅಥವಾ ಸಿ & ಡಿ ತಾಜ್ಯವನ್ನು ನಿಯಮಾನುಸಾರ ನಿಗಧಿತ ರೀತಿಯಲ್ಲಿ ಶೇಖರಣೆ ಮಾಡಲು ವಿಫಲರಾದಲ್ಲಿ	ರೂ. 1000/-	ರೂ. 2000/-
11	ಬೃಹತ್ ತ್ಯಾಜ್ಯೋತ್ಪಾದಕನಿಂದ ಘನತ್ಯಾಜ್ಯವನ್ನು ಸುಡುವುದು, ಸುರಿಯುವುದು ಮತ್ತು ಅಥವಾ ಅನಧಿಕೃತವಾಗಿ ಡೆಪಾಸಿಟ್ ಮಾಡಿದಲ್ಲಿ	ರೂ. 25,000/-	
12	ಬೃಹತ್ ತ್ಯಾಜ್ಯೋತ್ಪಾದಕನಲ್ಲದ ಇತರ ಯಾರೇ ತ್ಯಾಜ್ಯೋತ್ಪಾದಕನಿಂದ ಘನತ್ಯಾಜ್ಯವನ್ನು ಸುಡುವುದು, ಸುರಿಯುವುದು ಮತ್ತು ಅಥವಾ ಅನಧಿಕೃತವಾಗಿ ಡೆಪಾಸಿಟ್ ಮಾಡಿದಲ್ಲಿ	ರೂ. 5000/- ರಿಂದ 10,000/-	
13	(ಗೃಹೋತ್ಪಾದಿತವಲ್ಲದ) ಮೀನು, ಕೋಳಿಮೊಟ್ಟೆ ಮತ್ತು ಕಸಾಯಿಖಾನೆಯ ತ್ಯಾಜ್ಯವನ್ನು ಈ ಉಪನಿಯಮಗಳಡಿಯಲ್ಲಿ ನಿರ್ದಿಷ್ಟ ಪಡಿಸಿರುವ ವಿಂಗಡಿಸಿದ ಮಾದರಿಯಲ್ಲಿ ವಿಂಗಡಿಸಲು ಅಥವಾ ನೀಡಲು ವಿಫಲತೆ ಮತ್ತು ಸಾಮುದಾಯಿಕ ತೊಟ್ಟಿ, ಬುಟ್ಟಿಗಳು, ಸಾರ್ವಜನಿಕ ಸ್ಥಳ ಅಥವಾ ಇತರ ಯಾವುದೇ ಅನಧಿಕೃತ ಸ್ಥಳದಲ್ಲಿ ಸುರಿದಲ್ಲಿ	ರೂ. 100/-	ರೂ. 150/-
14	ಬೀದಿಬದಿಯ ವ್ಯಾಪಾರಿಯು ಯಾವುದೇ ಕಸದಬುಟ್ಟಿ/ ತೊಟ್ಟಿಯಿಲ್ಲದೆ ಇರುವುದು ಮತ್ತು/ ಅಥವಾ ಅಂತಹ ವ್ಯಕ್ತಿಯು ಘನತ್ಯಾಜ್ಯವನ್ನು ಈ ಉಪನಿಯಮಗಳಲ್ಲಿ ನಿರ್ದಿಷ್ಟ ಪಡಿಸಿದಂತೆ ವಿಂಗಡಣೆ ಮಾಡದೆ ಹಸ್ತಾಂತರಿಸದಿದ್ದಲ್ಲಿ	ರೂ. 50/-	ರೂ. 200/-
15	ಬೃಹತ್ ಘನತ್ಯಾಜ್ಯೋತ್ಪಾದಕನಾಗಿ ವರ್ಗೀಕರಣ ಮಾಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಈ ಉಪನಿಯಮಗಳಡಿಯಲ್ಲಿ ಸುಳ್ಳು ಸ್ವಯಂ ಘೋಷಣೆಯನ್ನು ಮಾಡಿಕೊಂಡಲ್ಲಿ	ರೂ. 3000/-	ರೂ. 10000/-
16	ಮುಖ್ಯಾಧಿಕಾರಿಗಳು ಕಾಲ ಕಾಲಕ್ಕೆ ರಸ್ತೆಗಳ, ಬಸ್ ಸ್ಟೇಷನ್ ಗಳ, ರೈಲ್ವೇ ಸ್ಟೇಷನ್ ಗಳ, ಬೀದಿಗಳ, ಆಟದ ಮೈದಾನಗಳ, ಪಾರ್ಕ್ಗಳ ಹಾಗು ಇತರೆ ಸಾರ್ವಜನಿಕ ಸೌಲಭ್ಯದ ಆವರಣಗಳಲ್ಲಿ ಸ್ವಚ್ಛತೆ ಹಾಗು ಶುಚಿತ್ವ ಕಾಪಾಡುವ ನಿಟ್ಟಿನಲ್ಲಿ ಹೊರಡಿಸುವ ಕಾನೂನು ಬದ್ಧ ನಿರ್ದೇಶನಗಳ ಪಾಲನೆ ಮಾಡಲು ವಿಫಲಾದಲ್ಲಿ	ರೂ. 100/-	ರೂ. 200/-
17	ಕೊಳೆತ ಅಥವಾ ಕಳಪೆ ಅಥವಾ ಇತರೆ ಘನ ತ್ಯಾಜ್ಯ ವಸ್ತುಗಳ ಅನಿಮಿಯತ ಶೇಖರಣೆ	ರೂ. 200/-	ರೂ. 400/-
18	ಸಿ ಅಂಡ್ ಡಿ ತ್ಯಾಜ್ಯದ ಅನಧಿಕೃತ ಡಂಪಿಂಗ್/ವಿಲೇವಾರಿ	ರೂ. 1000/-	ರೂ. 3000/-
19	ಬಯೋಮೆಡಿಕಲ್ ತ್ಯಾಜ್ಯ, ಇ-ತ್ಯಾಜ್ಯ ಹಾನಿಕಾರಕ ಮತ್ತು ಸ್ಯಾನಿಟರಿ ತ್ಯಾಜ್ಯದ ಅನಿಯಮಿತ ಶೇಖರಣೆ ಮತ್ತು ವಿಲೇವಾರಿ	ರೂ. 1000/-	ರೂ. 2000/-
20	ಅನಧಿಕೃತ ಮತ್ತು ಅವೈಜ್ಞಾನಿಕವಾಗಿ ಮಲತ್ಯಾಜ್ಯ	ರೂ. 500/-	ರೂ. 1000/-

	ಅಥವಾ ಇತರೆ ತ್ಯಾಜ್ಯ ನೀರನ್ನು ತರೆದ ಚರಂಡಿ ಅಥವಾ ಇತರೆ ಸ್ಥಳಗಳಲ್ಲಿ ವಿಲೇವಾರಿ ಮಾಡುವುದು		

p) ಸೂಚನೆಗಳು :

1. ಬೈಲಾ ಅನುಮೋದನೆಗೊಂಡ ದಿನಾಂಕದಿಂದ ಪ್ರತೀ ವರ್ಷಕ್ಕೊಮ್ಮೆ ದಂಡನೆಗಳ ಶುಲ್ಕಗಳನ್ನು ಶೇ. 5 ರಷ್ಟು ಹೆಚ್ಚಿಸಲಾಗುವುದು.
2. ಸರ್ಕಾರದಿಂದ ಬರುವ ನಿರ್ದೇಶನ/ಆದೇಶದಂತೆ ಮೇಲ್ಕಂಡ ಶುಲ್ಕಗಳನ್ನು ಮರು ಪರಿಷ್ಕರಿಸುವ ನಗರ ಪಂಚಾಯತ್ ಗೆ ಇರುತ್ತದೆ.
3. ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ದಂಡನೆಗಳಿಗೆ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಪರಿಶೀಲಿಸಿ ತಮ್ಮ ವಿವೇಚನಾಧಿಕಾರ ಬಳಸಿ ಶುಲ್ಕ ನಿಗದಿ ಪಡಿಸಿ, ವಸೂಲಾತಿ ಮಾಡಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.
4. ನಗರದಲ್ಲಿ ಸಾರ್ವಜನಿಕರು ಆಥವಾ ವ್ಯಾಪಾರಸ್ಥರು ಅಥವಾ ಇತರರು ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಅಥವಾ ಅಸಹನೀಯ/ಅಹಿತಕರ ಅಥವಾ ಪರಿಸರಕ್ಕೆ ಹಾನಿಯನ್ನು ಉಂಟು ಮಾಡುವ ಚಟುವಟಿಕೆಯನ್ನು ಪಾಲನೆ/ನಿರ್ವಹಿಸುತ್ತಿದ್ದಲ್ಲಿ ಅಂತಹಃ ವ್ಯಕ್ತಿಯನ್ನು ಗುರುತಿಸಿ ಪ್ರಶ್ನಿಸುವ ಅಧಿಕಾರ ನಗರ ಪಂಚಾಯತ್ ಅಧಿಕಾರಿಗಳಿಗೆ ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ಹೊಂದಿರುತ್ತದೆ ಹಾಗೂ ಈ ಅಂಶವನ್ನು ನಗರ ಪಂಚಾಯತ್‌ನ ಮುಖ್ಯಾಧಿಕಾರಿಯವರಿಗೆ ತಿಳಿಸಿ ಮುಂದಿನ ಕಾನೂನು ಕ್ರಮವನ್ನು ಕೈಗೊಳ್ಳುವ ಅಧಿಕಾರ ನಗರ ಪಂಚಾಯತ್‌ಗೆ ಇರುತ್ತದೆ.
5. ನಗರ ವ್ಯಾಪ್ತಿಯ ಯಾವುದೇ ಸ್ಥಳಗಳಲ್ಲಿ ನಗರದ ಹೊರಭಾಗದ ಅಥವಾ ನಗರ ವ್ಯಾಪ್ತಿಗೆ ಸೇರಿದ ಯಾವುದೇ ವ್ಯಕ್ತಿ ತ್ಯಾಜ್ಯಗಳನ್ನು(ಘನತ್ಯಾಜ್ಯ / ಡೆಬ್ರಿಸ್ ಇತ್ಯಾದಿ) ಅವೈಜ್ಞಾನಿಕವಾಗಿ ತರೆದ ಸ್ಥಳಗಳಲ್ಲಿ ವಿಲೇವಾರಿ ಮಾಡುತ್ತಿರುವುದು ಕಂಡು ಬಂದಲ್ಲಿ ಅಂತಹಃ ವ್ಯಕ್ತಿ/ಬಳಸಿದ ವಾಹನಗಳನ್ನು ಗುರುತಿಸಿ ಛಾಯಚಿತ್ರ/ವೀಡಿಯೋ ದಾಖಲೆ ಸಮೇತ ಮಾಹಿತಿ ನೀಡಿದಲ್ಲಿ ಸಾರ್ವಜನಿಕ ಮತ್ತು ನೈರ್ಮಲ್ಯದ ಹಿತದೃಷ್ಟಿಯಿಂದ ಅಂತಹಃ **ವ್ಯಕ್ತಿಯನ್ನು ಪ್ರೋತ್ಸಾಹಿಸುವ ಹಿತದೃಷ್ಟಿಯಿಂದ ತಪ್ಪಿತಸ್ಥರಿಗೆ ವಿಧಿಸಲಾಗುವ ದಂಡದ ಮೊತ್ತದಲ್ಲಿ ಶೇ 10 ರ ಮೊತ್ತವನ್ನು** ಅಥವಾ ಮುಖ್ಯಾಧಿಕಾರಿಯವರ ವಿವೇಚನೆ ತಕ್ಕಂತೆ ಪ್ರೋತ್ಸಾಹ ಧನವನ್ನು ನೀಡಲು ಕ್ರಮಕ್ಕೆಗೊಳ್ಳಲಾಗುವುದು.
6. ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

q) ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮ 2016

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಸಚಿವಾಲಯ ಇವರ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ಬೆಂಗಳೂರು, ದಿನಾಂಕ: 11-03-2016 ಮತ್ತು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ತಿದ್ದುಪಡಿ ನಿಯಮಗಳು 2021 ದಿನಾಂಕ: 12-08-2021 ರಂತೆ ಹಾಗು ರಾಷ್ಟ್ರೀಯ ಹಸಿರು ನ್ಯಾಯ ಪೀಠದ ಆದೇಶದಂತೆ ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಪರಿಸರಕ್ಕೆ ಹಾನಿ ಹಾಗೂ ಮಾನವ ಮತ್ತಿತರ ಪ್ರಾಣಿಗಳ ಆರೋಗ್ಯಕ್ಕೆ ಅಪಾಯ ಉಂಟು ಮಾಡುತ್ತಿರುವ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಪ್ಲೆಕ್ಸ್, ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ಸ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೊಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದಂತಹ ನಿಷೇಧಿತ ಉತ್ಪನ್ನಗಳ ಜೊತೆಗೆ ಏಕ ಬಳಕೆಯ ಪ್ಲಾಸ್ಟಿಕ್ (Single Use Plastic-SUP) ಉತ್ಪನ್ನ ವಸ್ತುಗಳ ತಯಾರಿಕೆ, ಸರಬರಾಜು ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿ ನಗರ ಪಂಚಾಯತ್‌ನಿಂದ ಆದೇಶ ಹೊರಡಿಸಲಾಗಿದ್ದರೂ ಹಲವಾರು ಉದ್ದಿಮೆದಾರರು, ವ್ಯಾಪಾರಸ್ಥರು, ರಸ್ತೆ ಬದಿಯ ವ್ಯಾಪಾರಸ್ಥರು ನಿಷೇದಿಸಿರುವ ಪ್ಲಾಸ್ಟಿಕ್ ವಸ್ತುಗಳ ಮಾರಾಟ ಮಾಡುತ್ತಿರುವುದು ಹಾಗೂ ಗ್ರಾಹಕರಿಗೆ ಪ್ಲಾಸ್ಟಿಕ್ ಚೀಲದಲ್ಲಿ ಸಾಮಾಗ್ರಿಗಳನ್ನು ವಿತರಣೆ ಮಾಡುತ್ತಿರುವುದುಕಂಡು ಬಂದ ಹಿನ್ನೆಲೆಯಲ್ಲಿ ಅಂತಹ ವ್ಯಾಪಾರಸ್ಥರ ಉದ್ದಿಮೆಯ ಮೇಲೆ ದಾಳಿ ನಡೆಸಿ ನಿಷೇದಿಸಿದ ಪ್ಲಾಸ್ಟಿಕ್ ವಸ್ತುಗಳನ್ನು ವಶಪಡಿಸಿ ದಂಡ ವಿಧಿಸಲಾಗಿದ್ದರೂ ಇನ್ನೂ ಅನೇಕ ಉದ್ದಿಮೆಗಳಲ್ಲಿ ಬಳಕೆ ಮತ್ತು

ಮಾರಾಟ ಮಾಡುತ್ತಿರುವುದು ಕಂಡುಬಂದಿದೆ. ಪ್ರಯುಕ್ತ ನಗರಾಭಿವೃದ್ಧಿ ಇಲಾಖೆಯ ಆದೇಶ ಸಂಖ್ಯೆ ನಅಇ/345/ಸಿಎಸ್ ಎಸ್2020 ದಿನಾಂಕ 09.06.2021 ರ ಆದೇಶದಲ್ಲಿ ವಿವರಿಸಿರುವಂತೆ ನಗರ ಪಂಚಾಯತ್ ಗೆ ಅನುಗುಣವಾಗಿ ವಿಧಿಸಬಹುದಾದ ದಂಡ ಮತ್ತು ಇತರೆ ವಿವರಗಳು.

ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ನಿಷೇಧಿತ ಪ್ಲಾಸ್ಟಿಕ್ ಸಾಮಾಗ್ರಿಗಳ ಅಕ್ರಮ ಮಾರಾಟ, ದಾಸ್ತಾನು ಸಂಗ್ರಹಣೆ ಹಾಗೂ ಬಳಕೆ ಕುರಿತಂತೆ ವಿಧಿಸಲಾಗುವ ದಂಡಗಳ ವಿವರ

ಕ್ರ. ಸಂ	ವಿವರ	ದಂಡ ಮೊದಲನೇ ಅಪರಾಧಕ್ಕೆ (ರೂ ಗಳಲ್ಲಿ)	ದಂಡ ಎರಡನೇ ಅವರಾಧಕ್ಕೆ (ರೂ ಗಳಲ್ಲಿ)	ದಂಡ ಮೂರನೇ ಅವರಾಧಕ್ಕೆ
1	ನಿಷೇಧಿತ ಪ್ಲಾಸ್ಟಿಕ್ ಸಾಮಾಗ್ರಿಗಳ ಅಕ್ರಮ ಮಾರಾಟ	100	200	ಉದ್ದಿಮೆ ಪರವಾನಗಿಯನ್ನು ರದ್ದುಗೊಳಿಸುವುದು ಹಾಗೂ ಕಾನೂನಾತ್ಮಕ ಕ್ರಮ ಕೈಗೊಳ್ಳುವುದು
2	ನಿಷೇಧಿತ ಪ್ಲಾಸ್ಟಿಕ್ ಸಾಮಾಗ್ರಿಗಳ ಅಕ್ರಮ ದಾಸ್ತಾನು			
	if < 1 kg	200	500	
	if > 1 kg upto 10 kg	500	1000	
	if > 10 kg upto 50 kg	1000	2000	
	if > 50 kg upto 100 kg	2000	5000	
	if > 100 kg	5000	10000	
3	ನಿಷೇಧಿತ ಪ್ಲಾಸ್ಟಿಕ್ ಸಾಮಾಗ್ರಿಗಳ ಅಕ್ರಮ ಬಳಕೆ	30	50	100

r) ಸೂಚನೆಗಳು :

i) ಬೈಲಾ ಅನುಮೋದನೆಗೊಂಡ ದಿನಾಂಕದಿಂದ **ಪ್ರತಿ ವರ್ಷಕೊಮ್ಮೆ ಸೇವಾ ಶುಲ್ಕವನ್ನು ಶೇಕಡಾ 5% ಹೆಚ್ಚಿಸಲಾಗುವುದು.**

ii) ಸರ್ಕಾರದಿಂದ ಬರುವ ನಿರ್ದೇಶನ/ ಆದೇಶದಂತೆ ಮೇಲ್ಕಂಡ ಶುಲ್ಕವನ್ನು ಮರು ಪರಿಷ್ಕರಿಸುವ ಅಧಿಕಾರ ನಗರ ಪಂಚಾಯತ್‌ಗೆ ಇರುತ್ತದೆ

iii) ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ದಂಡನೆಗಳಿಗೆ ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಪರಿಶೀಲಿಸಿ ತಮ್ಮ ವಿವೇಚನಾಧಿಕಾರ ಬಳಸಿ ಶುಲ್ಕ ನಿಗದಿ ಪಡಿಸಿ, ವಸೂಲಾತಿ ಮಾಡಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.

iv) ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು

s) ಬೃಹತ್ ತ್ಯಾಜ್ಯೋತ್ಪಾದಕರು ಮತ್ತು ಇತರ ಕರ್ತವ್ಯಗಳು

ದಿನಾಂಕ 8ನೇ ಏಪ್ರಿಲ್, 2016ರಂದು ಸರ್ಕಾರದಿಂದ ಅಧಿಸೂಚಿಸಲ್ಪಟ್ಟ ಘನ ತ್ಯಾಜ್ಯ ನಿರ್ವಹಣಾ (SWM) ನಿಯಮಗಳು-2016 ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಮತ್ತು ನಿರ್ದಿಷ್ಟ ಪಡಿಸಿದ ನೂತನ ನಿರ್ಮಾಣಗಳು ಕೆಲವು ಘನತ್ಯಾಜ್ಯ ನಿರ್ವಹಣಾ ಕರ್ತವ್ಯಗಳನ್ನು ತಾವೇ ನಿರ್ವಹಿಸಬೇಕೆಂದು ಕಡ್ಡಾಯ ಪಡಿಸುತ್ತದೆ. ಅದರಂತೆ ದಿನವೊಂದಕ್ಕೆ 100 ಕೆಜಿ ಅಥವಾ ಅದಕ್ಕೂ ಹೆಚ್ಚಿನ ಘನತ್ಯಾಜ್ಯವನ್ನು ಉತ್ಪಾದಿಸುವಂತಹ ಉತ್ಪಾದಕರುಗಳು(ಎಲ್ಲಾ ತ್ಯಾಜ್ಯ ಮೂಲಗಳಿಂದ) ಅಥವಾ (ii) 5000 ಚದರ ಮೀಟರುಗಳು ಅಥವಾ ಅದಕ್ಕೂ ಹೆಚ್ಚಿನ ಪ್ರದೇಶವನ್ನು ಹೊಂದಿರುವಂತಹ ಗೇಟೆಡ್ ಸಮುದಾಯಗಳು, ನಿಗಮಿತ ಸಂಕೀರ್ಣಗಳು ತಂತ್ರಜ್ಞಾನ ಸಂಕೀರ್ಣಗಳು ಅಥವಾ 30 ಕ್ಕಿಂತ ಹೆಚ್ಚು ಮನೆ/ಫ್ಲಾಟ್ ಹೊಂದಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ಮತ್ತು ಇತರೆ ದೊಡ್ಡ ಸಂಸ್ಥೆಗಳಲ್ಲಿ (ಹೋಟೆಲ್, ಆಸ್ಪತ್ರೆ, ಲಾಡ್ಜ್, ಕಲ್ಯಾಣಮಂಟಪ, ಕೆಟರಿಂಗ್ ಇತ್ಯಾದಿ) SWM ನಿಯಮಗಳು-2016 ಮತ್ತು ಅದರನ್ವಯ ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯ ನಗರ ಸ್ಥಳೀಯ ಸಂಸ್ಥೆಯಿಂದ ಹೊರಡಿಸಲಾದ ಪ್ರಕಟಣೆಯಂತೆ ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರು

ಘನತ್ಯಾಜ್ಯವನ್ನು ಮೂರು ವರ್ಗಗಳಾಗಿ (ಕೊಳೆಯಬಹುದಾದ ಜೈವಿಕ ತ್ಯಾಜ್ಯಗಳು, ಕೊಳೆಯಲಾರದಂತಹ ಜೈವಿಕ ರಹಿತ ತ್ಯಾಜ್ಯಗಳು ಮತ್ತು ಗೃಹೋತ್ಪಾದಕ ಹಾನಿಕಾರಕ ತ್ಯಾಜ್ಯಗಳು) ವಿಂಗಡಿಸುವುದೂ ಒಳಗೊಂಡಂತೆ ಮೂಲದಲ್ಲಿಯೇ ಮತ್ತು ಕೊಳೆಯಬಹುದಾದ ಜೈವಿಕ ತ್ಯಾಜ್ಯಗಳ ಸಂಸ್ಕರಣಾ ಮತ್ತು ಔಪಚಾರಿಕ ಸಂಕೀರ್ಣಗಳಲ್ಲಿ ಅನುಷ್ಠಾನಗೊಳಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತದೆ.

ಅದರಂತೆ ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಮೇಲೆ ತಿಳಿಸಿರುವ ಎಲ್ಲಾ ಬೃಹತ್ ಘನತ್ಯಾಜ್ಯೋತ್ಪಾದಕರು ಹಾಗು 30 ಕ್ಕಿಂತ ಹೆಚ್ಚು ಮನೆ / ಫ್ಲಾಟ್ ಹೊಂದಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ಮತ್ತು ಇತರೆ ದೊಡ್ಡ ಸಂಸ್ಥೆಗಳಲ್ಲಿ (ಹೋಟೆಲ್, ಆಸ್ಪತ್ರೆ, ಲಾಡ್ಜ್, ಕಲ್ಯಾಣ ಮಂಟಪ, ಕೆಟರಿಂಗ್ ಇತ್ಯಾದಿ) ಸ್ವಂತ ತ್ಯಾಜ್ಯ ಸಂಸ್ಕರಣ ಕಾಂಪೋಸ್ಟಿಂಗ್ ಘಟಕವನ್ನು (On-site Composting) ಕಡ್ಡಾಯವಾಗಿ ನಿರ್ಮಿಸುವಂತೆ ಮತ್ತು ಉತ್ಪಾದನೆಯಾಗುವ ತ್ಯಾಜ್ಯವನ್ನು ಸ್ಥಳದಲ್ಲಿಯೇ ಸಂಸ್ಕರಣೆ ಮಾಡುವಂತೆ ಸೂಚಿಸಲಾಗಿದೆ.

ಆದರೆ ಯಾವೂದೇ ಸಂಸ್ಥೆಗಳು ತಮ್ಮ ಆವರಣದಿಂದ 100 ಕೆಜಿಗಿಂತ ಕಡಿಮೆ ತ್ಯಾಜ್ಯವನ್ನು ಉತ್ಪಾದಿಸುತ್ತಿರುವರೆಂದು ಮತ್ತು ತಾನು ಬೃಹತ್ ತ್ಯಾಜ್ಯ ಉತ್ಪಾದಕನಲ್ಲವೆಂದು ನಿರೂಪಿಸಲಾಗಿರುವ ನಿಗದಿತ ನಮೂನೆಯಲ್ಲಿ ಸ್ವಯಂ ಘೋಷಣೆ ಮಾಡಿಕೊಳ್ಳಲು ಸೂಚಿಸಲಾಗಿದೆ.

t) ಸ್ವಂತ ತ್ಯಾಜ್ಯ ಸಂಸ್ಕರಣ ಕಾಂಪೋಸ್ಟಿಂಗ್ ಘಟಕವನ್ನು (On-site Composting) ಸ್ಥಾಪಿಸುವ ಸಂಸ್ಥೆ/ ವೈಯುಕ್ತಿಕ ಮನೆ ಹಾಗೂ ಉದ್ದಿಮೆ ಸಂಸ್ಥೆಗಳಿಗೆ ಘನತ್ಯಾಜ್ಯ ವಿಲೇವಾರಿ ಹಾಗೂ ನಿರ್ವಹಣೆಯ ಸೇವಾ ಶುಲ್ಕದಲ್ಲಿ ವಿನಾಯಿತಿ ನೀಡುವ ಬಗ್ಗೆ

ಘನ ತ್ಯಾಜ್ಯ ನಿರ್ವಹಣಾ (SWM) ನಿಯಮಗಳು-2016 ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿರ್ದೇಶನದಂತೆ ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿರುವ (ಬೃಹತ್ ತ್ಯಾಜ್ಯೋತ್ಪಾದಕರು) ಅಪಾರ್ಟ್ಮೆಂಟ್‌ಗಳಲ್ಲಿ, ಮನೆಗಳಲ್ಲಿ ಮತ್ತು ಇತರೆ ದೊಡ್ಡ ಸಂಸ್ಥೆಗಳಲ್ಲಿ ಸ್ವಂತ ತ್ಯಾಜ್ಯ ಸಂಸ್ಕರಣೆ ಕಾಂಪೋಸ್ಟಿಂಗ್ ಘಟಕವನ್ನು (On-site Composting) ನಿರ್ಮಿಸಿಸುವ ಮತ್ತು ಉತ್ಪಾದನೆಯಾಗುವ ತ್ಯಾಜ್ಯವನ್ನು ಸ್ಥಳದಲ್ಲಿಯೇ ಸಂಸ್ಕರಣೆ ಮಾಡುವ ವಸತಿ ಮತ್ತು ವಾಣಿಜ್ಯ ಸಂಸ್ಥೆಗಳು ನಗರ ಪಂಚಾಯತ್ ನಿಗಧಿ ಪಡಿಸಿದ ನಮೂನೆಯಲ್ಲಿ ಅರ್ಜಿ ಸಲ್ಲಿಸಿದಲ್ಲಿ ನಿಯಮಾನುಸಾರವಾಗಿ ಪರಿಶೀಲಿಸಿ ಕೆಳಕಂಡ ಷರತ್ತುಗಳನ್ನು ವಿಧಿಸಿ ಸದರಿ ಸಂಸ್ಥೆಗಳಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಆಸ್ತಿ ತೆರಿಗೆ /ಉದ್ದಿಮೆ ಪರವಾನಿಗೆಯೊಂದಿಗೆ ಪಾವತಿಸುವ ಘನತ್ಯಾಜ್ಯ ವಿಲೇವಾರಿ ಹಾಗೂ ನಿರ್ವಹಣೆಯ ಸೇವಾ ಶುಲ್ಕದ ಒಟ್ಟು ಮೊತ್ತದಲ್ಲಿ ಶೇಕಡ 50 ರಷ್ಟು ವಿನಾಯತಿ ನೀಡಬಹುದಾಗಿದೆ.

u) ಸೂಚನೆಗಳು :

a. ತಮ್ಮ ಅಪಾರ್ಟ್ಮೆಂಟ್/ಸಂಸ್ಥೆಯಲ್ಲಿ ವಾಸವಿರುವ ಎಲ್ಲಾ ನಿವಾಸಿಗಳು ತ್ಯಾಜ್ಯವನ್ನು ಕಡ್ಡಾಯವಾಗಿ ಕಸವನ್ನು ಹಸಿ, ಒಣ ಮತ್ತು ಸ್ಯಾನಿಟರಿ ಕಸವನ್ನಾಗಿ ವಿಂಗಡಿಸಿ ಹಸಿ ತ್ಯಾಜ್ಯವನ್ನು ತ್ಯಾಜ್ಯ ಸಂಸ್ಕರಣೆ ಕಾಂಪೋಸ್ಟಿಂಗ್ ಘಟಕದಲ್ಲಿ ((On-site Composting) ಸಂಸ್ಕರಣೆ ಮಾಡತಕ್ಕದ್ದು, ಯಾವುದೇ ಕಾರಣಕ್ಕೂ ಮುಲ್ಕಿ ನಗರ ಪಂಚಾಯತ್ ವಾಹನಕ್ಕೆ ನೀಡತಕ್ಕದಲ್ಲ.

b. ತಮ್ಮ ಅಪಾರ್ಟ್ಮೆಂಟ್/ಸಂಸ್ಥೆಯಲ್ಲಿ ಪ್ರಸ್ತುತ ವಾಸಿಸದೆ ಖಾಲಿಯಿರುವ ಪ್ಲಾಟ್‌ಗಳು, ಮುಂಬರು ದಿನಗಳಲ್ಲಿ ಪ್ಲಾಟ್‌ಗಳು ಆಕ್ರಮಿಸಿದಲ್ಲಿ, ಸದರಿ ಪ್ಲಾಟ್‌ಗಳಿಂದ ಉತ್ಪತ್ತಿಯಾಗುವ ಹಸಿ ತ್ಯಾಜ್ಯದ ಸಂಸ್ಕರಣೆಗೆ

ಕಾಂಪೋಸ್ಟಿಂಗ್ ಘಟಕದಲ್ಲಿ ((On-site Composting) ಸಾಮರ್ಥ್ಯವನ್ನು ಹೆಚ್ಚಿಸುವುದು. ಯಾವುದೇ ಕಾರಣಕ್ಕೂ ಮುಲ್ಕಿ ನಗರ ಪಂಚಾಯತ್ ವಾಹನಕ್ಕೆ ನೀಡತಕ್ಕದಲ್ಲ.

c. ಒಣ ಕಸಗಳ ಪೈಕಿ ಪುನರ್ ಬಳಕೆ/ಇತರೆ ತ್ಯಾಜ್ಯವನ್ನು ಗುಜರಿ ಅಥವಾ ಚಿಂದಿ ಆಯುವವರಿಗೆ ನೀಡಿ ಉಳಿಕೆ ನಿರುಪಯುಕ್ತ ಒಣ ತ್ಯಾಜ್ಯವನ್ನು ಮಾತ್ರ ಮುಲ್ಕಿ ನಗರ ಪಂಚಾಯತ್ ವಾಹನಕ್ಕೆ ನೀಡುವುದು.

d. ಸ್ಯಾನಿಟರಿ ತ್ಯಾಜ್ಯವನ್ನು ಪ್ರತ್ಯೇಕ ಸ್ಯಾನಿಟರಿ ನ್ಯಾಪ್ಕಿನ್ ಇನ್‌ಸಿನೇಟರ್ (Sanitary napkin Incinerator) ಯಂತ್ರ ಮುಖಾಂತರ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವುದು.

e. ಚಾಲ್ತಿ ಸಾಲಿನಲ್ಲಿ ಹಸಿ ತ್ಯಾಜ್ಯವನ್ನು ನಿರಂತರವಾಗಿ ತ್ಯಾಜ್ಯ ಸಂಸ್ಕರಣೆ ಕಾಂಪೋಸ್ಟಿಂಗ್ ಘಟಕದಲ್ಲಿ ಸಂಸ್ಕರಣೆ ಮಾಡಿದಲ್ಲಿ ಹಾಗೂ ಮುಲ್ಕಿ ನಗರ ಪಂಚಾಯತ್ ವಾಹನಕ್ಕೆ ಯಾವುದೇ ಸಂದರ್ಭದಲ್ಲಿ ನೀಡದೇ ಇದ್ದಲ್ಲಿ ಮಾತ್ರ ಮುಂದಿನ ಸಾಲಿನ ಆಸ್ತಿ ತೆರಿಗೆಯಲ್ಲಿ ಘನತ್ಯಾಜ್ಯ ಸೆಸ್‌ನ ಒಟ್ಟು ಮೊತ್ತದಲ್ಲಿ ಶೇಕಡ 50 ರಷ್ಟು ವಿನಾಯಿತಿ ಪಡೆಯಲು ಅರ್ಹರಾಗುವುದು.

f. ತ್ಯಾಜ್ಯ ಸಂಸ್ಕರಣೆ ಕಾಂಪೋಸ್ಟಿಂಗ್ ಘಟಕವನ್ನು ನಿಯಮಿತವಾಗಿ ನಿರ್ವಹಿಸದೆ ಅರ್ಧದಲ್ಲಿಯೇ ಸ್ಥಗಿತಗೊಳಿಸಿದಲ್ಲಿ ಮತ್ತು ಮುಲ್ಕಿ ನಗರ ಪಂಚಾಯತ್ ವಾಹನಕ್ಕೆ ನೀಡುವುದು ಕಂಡು ಬಂದಲ್ಲಿ ನೀಡಿರುವ ಸ್ವಯಂ ಘೋಷಣಾ ಪ್ರಮಾಣ ಪತ್ರ ಆಧಾರದಲ್ಲಿ ತಮ್ಮ ಸಂಸ್ಥೆಯ ಎಲ್ಲಾ ನಿವಾಸಿಗಳಿಗೆ ನೀಡಲು ಉದ್ದೇಶಿಸಿರುವ ಆಸ್ತಿ ತೆರಿಗೆಯಲ್ಲಿನ ಘನತ್ಯಾಜ್ಯ ಸೆಸ್‌ನ ವಿನಾಯಿತಿಯನ್ನು ರದ್ದುಗೊಳಿಸಲಾಗುವುದು ಮತ್ತು ನಿಗಧಿಸಲ್ಪಡುವ ದಂಡ ಹಾಗೂ ಎಲ್ಲಾ ಕಾನುನು ಕ್ರಮಕ್ಕೆ ಬದ್ದರಾಗಿರತಕ್ಕದ್ದು.

g. ತ್ಯಾಜ್ಯವನ್ನು ವಿಂಗಡಣೆ ಮಾಡದೆ ನೀಡುವವರಿಗೆ, ಬೃಹತ್ ತ್ಯಾಜ್ಯ ಉತ್ಪಾದಕರು ತ್ಯಾಜ್ಯ ಸಂಸ್ಕರಣೆ ಮಾಡಿದ್ದಲ್ಲಿ. ಹಾಗೂ ರಸ್ತೆಯ ಬದಿಯಲ್ಲಿ ಬಿಸಾಡುವವರಿಗೆ ಘನತ್ಯಾಜ್ಯ ವಸ್ತುಗಳ ಬೈಲಾ ಪ್ರಕಾರ ದಂಡ ವಿಧಿಸಲು ಕ್ರಮವಹಿಸಲಾಗುವುದು.

h. ಅರ್ಜಿದಾರರು ಹೊಸ ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ಆಯಾ ವಾರ್ಷಿಕ ಸಾಲಿನ ಅಕ್ಟೋಬರ್ ಮಾಹೆಯ ಒಳಗಾಗಿ ಅರ್ಜಿಯನ್ನು ಸಲ್ಲಿಸಿದಲ್ಲಿ ಮಾತ್ರ ಪರಿಗಣಿಸಲಾಗುವುದು ತಪ್ಪಿದಲ್ಲಿ ಮುಂದಿನ ವಾರ್ಷಿಕ ಸಾಲಿಗೆ ಪರಿಗಣಿಸಲಾಗುವುದು.

v) ಬೃಹತ್ ತ್ಯಾಜ್ಯೋತ್ಪಾದಕನ ಕರ್ತವ್ಯಗಳು (Duties of Bulk Waste Generators)

1. ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರು ಸಹ ನಿಯಮದಲ್ಲಿ ನಿರೂಪಿಸಿರುವಂತೆ ತಮ್ಮ ಆವರಣದಲ್ಲಿ ಮೂಲದಲ್ಲಿಯೇ ಘನತ್ಯಾಜ್ಯದ ವಿಂಗಡಿಸಿ ಖಾತ್ರಿ ಪಡಿಸತಕ್ಕದ್ದು ಮತ್ತು ಸದರಿ ವಿಂಗಡಿಸಿದ ಘನ ತ್ಯಾಜ್ಯವನ್ನು ಈ ಉಪನಿಯಮಗಳಲ್ಲಿ ನಿರೂಪಿಸಿರುವ ವಿಧಾನದಲ್ಲಿ ಸಂಗ್ರಹಣೆ, ಸಂಸ್ಕರಣೆ ಮತ್ತು ವಿಂಗಡಣೆಗೆ ಅನುವು ಮಾಡಿಕೊಡತಕ್ಕದ್ದು. ಬೃಹತ್ ತ್ಯಾಜ್ಯೋತ್ಪಾದಕನು ಅಗತ್ಯವಿದ್ದಲ್ಲಿ, ಪಟ್ಟಿಯಲ್ಲಿರುವ ಸೇವಾದಾರನ ನೆರವನ್ನು ವಿಭಜಿತವಾದ ಘನತ್ಯಾಜ್ಯದ ಸಂಗ್ರಹಣೆ, ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಅಂತಹ ಸೇವೆಗಳಿಗೆ ಸಂಬಂಧಿಸಿದಂತೆ ಶುಲ್ಕವೂ ಒಳಗೊಂಡಂತೆ ಪರಸ್ಪರ ಒಪ್ಪಿಗೆಯಾದ ನಿಬಂಧನೆಗಳ ಮೇಲೆ ಪಡೆಯಬಹುದು.

2. ಬೃಹತ್ ತ್ಯಾಜ್ಯ ಉತ್ಪಾದಕರು ಸ್ಥಳಾವಕಾಶದ ಕಾರಣದಿಂದ ಮತ್ತು ಎಂಪಾನೆಲ್ಡ್ ಮಾರಾಟಗಾರರಿಂದ, ಉತ್ಪತ್ತಿಯಾಗುವ ಹಸಿ ತ್ಯಾಜ್ಯವನ್ನು ಸಂಸ್ಕರಣೆ ಮಾಡಲು ವಿಫಲವಾದಲ್ಲಿ, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ನಗರ ಸ್ಥಳೀಯ ಸಂಸ್ಥೆಯು ಪ್ರಾಥಮಿಕ ತ್ಯಾಜ್ಯ ಸಂಗ್ರಹಣೆ ವ್ಯವಸ್ಥೆಯು ಮೂಲಕ ನಿರ್ವಹಿಸುವುದು.

(i) 1 ಲಕ್ಷಕ್ಕಿಂತ ಕಡಿಮೆ ಜನ ಸಂಖ್ಯೆಯುಳ್ಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಉಪನಿಯಮಗಳ ಅಧಿಸೂಚನೆ ಹೊರಡಿಸಿದ 2 ವರ್ಷಗಳ ವರೆಗೆ

(ii) 10 ಲಕ್ಷಕ್ಕಿಂತ ಹೆಚ್ಚು ಜನ ಸಂಖ್ಯೆಯುಳ್ಳ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ಉಪನಿಯಮಗಳ ಅಧಿಸೂಚನೆ ಹೊರಡಿಸಿದ 1 ವರ್ಷದ ವರೆಗೆ

3. ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರುಗಳೂ ಸಹ ತಮ್ಮ ಕೊಳೆಯಬಹುದಾದ ಜೈವಿಕ ತ್ಯಾಜ್ಯವನ್ನು ಕಾಂಪೊಸ್ಟಿಂಗ್, ಬಯೋಮಿಥೆನೇಷನ್ ಅಥವಾ ಕೆಎಸ್‌ಪಿಸಿಬಿ / ಸಿಪಿಸಿಬಿಯಿಂದ ಅನುಮೋದಿಸಲ್ಪಟ್ಟ ಇತರ ಯಾವುದೇ ವಿಧಾನದಲ್ಲಿ ತಮ್ಮ ಆವರಣಗಳಲ್ಲಿ ಸಂಸ್ಕರಣೆ ಮಾಡಬಹುದು, ಅಥವಾ ತಮ್ಮ ಕೊಳೆಯುವಂತಹ ಜೈವಿಕ ತ್ಯಾಜ್ಯಗಳನ್ನು ತಾವೇ ನೇಮಿಸಿಕೊಂಡಂತಹ ಪಟ್ಟಿಯಲ್ಲಿರುವ ಸೇವಾದಾರರಿಂದ ನಿಗದಿ ಪಡಿಸಿದ ಸ್ಥಳಗಳಲ್ಲಿ ಸಂಸ್ಕರಣೆಗೊಳಿಸಬಹುದು. ಈ ಉಪನಿಯಮಗಳು ಜಾರಿಗೆ ಬಂದ ದಿನಾಂಕದಿಂದ ನಿಗಧಿತ ಅವಧಿಯೊಳಗೆ ಒಂದು ವೇಳೆ ಸ್ಥಳಾಭಾವದ ಕಾರಣದಿಂದಾಗಿ, ಬೃಹತ್ ತ್ಯಾಜ್ಯೋತ್ಪಾದಕರು ತಮ್ಮ ಕೊಳೆಯಬಹುದಾದ ಜೈವಿಕ ತ್ಯಾಜ್ಯಗಳನ್ನು ಸಂಸ್ಕರಿಸಲು ಸಾಧ್ಯವಾಗದಿದ್ದಲ್ಲಿ, ಅಥವಾ ಪಟ್ಟಿಯಲ್ಲಿರುವಂತಹ ಸೇವಾದಾರನನ್ನು ನೇಮಕ ಮಾಡಿಕೊಳ್ಳಲು ಸಾಧ್ಯವಾಗದಿದ್ದಲ್ಲಿ, ನಗರ ಸ್ಥಳೀಯ ಸಂಸ್ಥೆಯು ತಾನೇ ಸ್ವತಃ ಅಥವಾ ತನ್ನ ನಿಯೋಜಿಸಲ್ಪಟ್ಟ ವ್ಯಕ್ತಿ / ಏಜೆನ್ಸಿಯ ಮೂಲಕ ಕೊಳೆಯಬಹುದಾದ ಜೈವಿಕ ತ್ಯಾಜ್ಯವನ್ನು ಬೃಹತ್ ತ್ಯಾಜ್ಯೋತ್ಪಾದಕರಿಂದ ಮನೆಬಾಗಿಲಿನಿಂದಲೇ ಸಂಗ್ರಹಣೆ ಮಾಡುವ ವ್ಯವಸ್ಥೆಯಡಿಯಲ್ಲಿ ದುಪ್ಪಟ್ಟು ಸೇವಾ ಶುಲ್ಕವನ್ನು ಪಾವತಿಸಿ ಸೇವೆಯನ್ನು ಪಡೆಯಬಹುದಾಗಿರುತ್ತದೆ.

4. ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರುಗಳು ಸಹ

i. ತಮ್ಮದೇ ಆದ ವ್ಯವಸ್ಥೆಯಡಿಯಲ್ಲಿ ಕೊಳೆಯದ ಜೈವಿಕ ರಹಿತ ತ್ಯಾಜ್ಯವನ್ನು ಈ ಉಪನಿಯಮಗಳು ಮತ್ತು SWM ನಿಯಮಗಳಡಿಯಲ್ಲಿ ಸಂಸ್ಕರಣೆ ಮಾಡಬಹುದು.

ii. ಪಟ್ಟಿಯಲ್ಲಿರುವಂತಹ ಸೇವಾದಾರರನ್ನು ಅವರುಗಳ ಕೊಳೆಯದಂತಹ ಜೈವಿಕ ರಹಿತ ತ್ಯಾಜ್ಯವನ್ನು ಪರಸ್ಪರ ಒಪ್ಪಿಕೊಂಡ ನಿಬಂಧನೆಗಳಡಿಯಲ್ಲಿ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ ನೇಮಕ ಮಾಡಿಕೊಳ್ಳಬಹುದು.

iii. ಅವರುಗಳ ಜೈವಿಕ ರಹಿತ ತ್ಯಾಜ್ಯಗಳನ್ನು ಮನೆ ಬಾಗಿಲಿನಿಂದಲೇ ಸಂಗ್ರಹಣೆ ವ್ಯವಸ್ಥೆಯಡಿಯಲ್ಲಿನ ಭಾಗವಾಗಿ ನಗರ ಸ್ಥಳೀಯ ಸಂಸ್ಥೆಯ ಸಂಗ್ರಹಣಾ ವಾಹನಕ್ಕೆ SWM ಸೇವಾ ಶುಲ್ಕದ ಪಾವತಿಯ ಆಧಾರದ ಮೇಲೆ ನಿರೂಪಿಸಿರುವಂತೆ ಹಸ್ತಾಂತರಿಸಬಹುದು.

5. ಎಲ್ಲಾ ಬೃಹತ್ ತ್ಯಾಜ್ಯೋತ್ಪಾದಕರುಗಳು ಸಹ

i. ತಮ್ಮ ಗೃಹೋತ್ಪಾದಿತ ಹಾನಿಕಾರಕ ತ್ಯಾಜ್ಯ ಹಾಗೂ ನೈರ್ಮಲ್ಯದ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಗಾಗಿ ನಗರ ಸ್ಥಳೀಯ ಸಂಸ್ಥೆಯ ಪಟ್ಟಿಯಲ್ಲಿರುವ ಸೇವಾದಾರರ ಸೇವೆಯನ್ನು ಪರಸ್ಪರ ಒಪ್ಪಿಗೆಯಾದ ನಿಬಂಧನೆಗಳ ಮೇರೆಗೆ ಪಡೆಯಬಹುದು.

ii. ತಮ್ಮ ಗೃಹೋತ್ಪಾದಿತ ಹಾನಿಕಾರಕ ತ್ಯಾಜ್ಯ ಹಾಗೂ ನೈರ್ಮಲ್ಯದ ತ್ಯಾಜ್ಯಗಳನ್ನು ಮನೆ ಬಾಗಿಲಿನಿಂದಲೇ ಸಂಗ್ರಹಣೆ ವ್ಯವಸ್ಥೆಯಡಿಯಲ್ಲಿನ ಭಾಗವಾಗಿ ನಗರ ಪಂಚಾಯತ್ ಸಂಗ್ರಹಣಾ ವಾಹನಕ್ಕೆ SWM ಸೇವಾ ಶುಲ್ಕದ ಪಾವತಿಯ ಆಧಾರದ ಮೇಲೆ ಅನುಸೂಚಿಯಲ್ಲಿ ನಿರೂಪಿಸಿರುವಂತೆ ಹಸ್ತಾಂತರಿಸಬಹುದು.

w) ಕಟ್ಟಡ ನಿರ್ಮಾಣ ಮತ್ತು ಕೆಡುಹುವಿಕೆ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 (Construction And Demolition Waste Management Rules (C & D) 2016)

ಅನುಷ್ಠಾನ

ಕಟ್ಟಡ ನಿರ್ಮಾಣ ಮತ್ತು ಕೆಡುಹುವಿಕೆ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 (Construction And Demolition Waste Management Rules (C&D) 2016) ರನ್ವಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮಲ್ಲಿ ಉತ್ಪತ್ತಿಯಾಗುತ್ತಿರುವ C&D ತ್ಯಾಜ್ಯ ಪ್ರಮಾಣವನ್ನು ನಿಖರವಾಗಿ ಅಂದಾಜಿಸಬೇಕು ಹಾಗು C & D ತ್ಯಾಜ್ಯ ಸಂಗ್ರಹಣೆ ಮತ್ತು ನಿರ್ವಹಣೆಗೆ ಅಗತ್ಯ ಜಾಗವನ್ನು ಗುರುತಿಸಿ ಹೊಂದಬೇಕು. ಪರ್ಯಾಯ ಜಾಗದ ವ್ಯವಸ್ಥೆಯಾಗುವವರೆಗೂ ನೆಲಭರ್ತಿ ಜಾಗದಲ್ಲಿ C&D ತ್ಯಾಜ್ಯ ನಿರ್ವಹಣೆಗಾಗಿ ಅಗತ್ಯ ಜಾಗವನ್ನು ಮೀಸಲಿಡಬಹುದಾಗಿರುತ್ತದೆ.

C&D ನಿಯಮಗಳ ಅಡಿಯಲ್ಲಿ ಅರ್ಹ ತ್ಯಾಜ್ಯ ಉತ್ಪಾದಕರು ಸ್ಥಳೀಯ ಸಂಸ್ಥೆಗಳು ಅಥವಾ KSPCB ಅಧಿಕೃತ C&D ಮರುಬಳಕೆದಾರ ಸೇರಿದಂತೆ ಏಜೆನ್ಸಿ/ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ ವೈಜ್ಞಾನಿಕವಾಗಿ ಸಂಸ್ಕರಣೆ ಮತ್ತು ವಿಲೇವಾರಿ ಮಾಡಬಹುದು. ಇದಲ್ಲದೆ C&D ನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಸಂಬಂಧಿತ ಶುಲ್ಕಗಳನ್ನು ಪಾವತಿಸಿದ ನಂತರ, ನಗರ ಸ್ಥಳೀಯ ಸಂಸ್ಥೆಗಳು ಅಥವಾ ಏಜೆನ್ಸಿ/ಸೇವಾ ಪೂರೈಕೆದಾರರು,

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment WPP No. 297

ನಿರ್ದಿಷ್ಟ ಸಮಯದೊಳಗೆ ತ್ಯಾಜ್ಯ ಜನರೇಟರ್‌ನಿಂದ ಪ್ರತ್ಯೇಕವಾದ ನಿರ್ಮಾಣ ಮತ್ತು ಡೆಮಾಲಿಷನ್ ತ್ಯಾಜ್ಯವನ್ನು ಸಂಗ್ರಹಿಸಿ ಈ ತ್ಯಾಜ್ಯವನ್ನು ಸಿ ಮತ್ತು ಡಿ ನಿಯಮಗಳಿಗೆ ಅನುಸಾರವಾಗಿ ಅಧಿಕೃತ ಸಂಸ್ಕರಣಾ ಕೇಂದ್ರ ಅಥವಾ ಯಾವುದೇ ಗೊತ್ತುಪಡಿಸಿದ ಸ್ಥಳಕ್ಕೆ ಸಾಗಿಸಲು ಕ್ರಮ ಕೈಗೊಳ್ಳತಕ್ಕದ್ದು.

ಪ್ರಸ್ತುತ ಮುಲ್ಕಿ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಉತ್ಪಾತ್ತಿಯಾಗುತ್ತಿರುವ C & D ತ್ಯಾಜ್ಯವನ್ನು ಮುಲ್ಕಿ ನಗರ ಪಂಚಾಯತ್ ವತಿಯಿಂದಲೇ ಸಂಗ್ರಹಿಸಿ ನೆಲಭರ್ತಿ ಜಾಗದಲ್ಲಿ ಶೇಖರಿಸಲಾಗುತ್ತಿದೆ. C & D ತ್ಯಾಜ್ಯ ಉತ್ಪಾದಕರಿಂದ ಯಾವುದೇ ನಿರ್ಧಿಷ್ಟ ಸೇವಾ ಶುಲ್ಕವನ್ನು ವಸೂಲಿ ಮಾಡಲಾಗುತ್ತಿಲ್ಲ , ಕಟ್ಟಡ ನಿರುಪಯುಕ್ತ ವಸ್ತುಗಳನ್ನು ಹಾಕಲು ಹಾಗೂ ಅದರೆ ನಿರ್ವಹಣೆಗೆ ಹಣಕಾಸನ್ನು ಸರಿದೂಗಿಸಲು ಕಟ್ಟಡ ನಿರ್ಮಾಣ ಪರವಾನಿಗೆ ನೀಡುವಾಗ ಸೂಕ್ತ ಸೇವಾ ಶುಲ್ಕ ವಸೂಲಿ ಮಾಡಲು ದರವನ್ನು ನಿಗಧಿಪಡಿಸುವ ಉದ್ದೇಶದಿಂದ ಇತರೆ ಸ್ಥಳೀಯ ಸಂಸ್ಥೆಯಲ್ಲಿರುವಂತೆ **ಪ್ರತಿ ಚದರ ಮೀಟರ್‌ಗೆ ರೂ. 30.00 ರಂತೆ ಶುಲ್ಕ ವಸೂಲಿ ಮಾಡಬಹುದೆಂದು ಅಭಿಪ್ರಾಯಿಸಲಾಗಿದೆ. ಈ ಸೇವಾ ಶುಲ್ಕವನ್ನು ಕಟ್ಟಡ ಪರವಾನಿಗೆ ನೀಡುವಾಗ ವಸೂಲಿ ಮಾಡಬಹುದಾಗಿದೆ.**

ಕ್ರ. ಸಂ.	ವಿವರ	ಸೇವಾ ಶುಲ್ಕ
1.	ಕಟ್ಟಡ ನಿರ್ಮಾಣ ಮತ್ತು ಕೆಡುಹುವಿಕೆ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆ (ನಗರ ಪಂಚಾಯತ್ ವಾಹನ)	➢ 2 ಟನ್ ಕಡಿಮೆ ಸಾಮರ್ಥ್ಯದ ಟಿಪ್ಪರ್ : ರೂ 2500/ ಟ್ರಿಪ್ 2 ಟನ್ ಹೆಚ್ಚು ಸಾಮರ್ಥ್ಯದ ಟಿಪ್ಪರ್ : ರೂ 4000/ ಟ್ರಿಪ್
2.	ಕಟ್ಟಡ ನಿರ್ಮಾಣ ಮತ್ತು ಕೆಡುಹುವಿಕೆ ತ್ಯಾಜ್ಯಗಳ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆ (ಖಾಸಗಿ ವಾಹನ)	➢ 2 ಟನ್ ಕಡಿಮೆ ಸಾಮರ್ಥ್ಯದ ಟಿಪ್ಪರ್ : ರೂ 500/ ಟ್ರಿಪ್ 2 ಟನ್ ಹೆಚ್ಚು ಸಾಮರ್ಥ್ಯದ ಟಿಪ್ಪರ್ : ರೂ 1000/ ಟ್ರಿಪ್

x) ಸೂಚನೆಗಳು :

i) ಬೈಲಾ ಅನುಮೋದನೆಗೊಂಡ ದಿನಾಂಕದಿಂದ **ಪ್ರತಿ ವರ್ಷಕೊಮ್ಮೆ ಸೇವಾ ಶುಲ್ಕವನ್ನು ಶೇಕಡಾ 5% ಹೆಚ್ಚಿಸಲಾಗುವುದು.**

ii) ಸರ್ಕಾರದಿಂದ ಬರುವ ನಿರ್ದೇಶನ/ ಆದೇಶದಂತೆ ಮೇಲ್ಕಂಡ ಸೇವಾ ಶುಲ್ಕವನ್ನು ಮರು ಪರಿಷ್ಕರಿಸುವ ಅಧಿಕಾರ ನಗರ ಪಂಚಾಯತ್‌ಗೆ ಇರುತ್ತದೆ.

iii) ಈ ಮೇಲಿನ ಕೋಷ್ಟಕದಲ್ಲಿ ಇಲ್ಲದೆ ಹೊರಗುಳಿದ ಯಾವುದೇ ಸೇವಾ ಶುಲ್ಕವನ್ನು ಸ್ಥಳೀಯ ಸಂಸ್ಥೆಯ ಮುಖ್ಯಾಧಿಕಾರಿಗಳು ಪರಿಶೀಲಿಸಿ ತಮ್ಮ ವಿವೇಚನಾಧಿಕಾರ ಬಳಸಿ ಶುಲ್ಕ ನಿಗದಿ ಪಡಿಸಿ, ವಸೂಲಾತಿ ಮಾಡಲು ಅಧಿಕಾರವನ್ನು ಹೊಂದಿರುತ್ತಾರೆ ಎಂದು ತಿಳಿಯತಕ್ಕದ್ದು.

iv) ಕಾಲ ಕಾಲಕ್ಕೆ ನಗರ ಪಂಚಾಯತ್ ವಿಧಿಸುವ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು.

ಸಹಿ/-
ಆಡಳಿತಾಧಿಕಾರಿ
ನಗರ ಪಂಚಾಯತ್ ಮುಲ್ಕಿ

ಸಹಿ/-
ಮುಖ್ಯಾಧಿಕಾರಿ
ನಗರ ಪಂಚಾಯತ್ ಮುಲ್ಕಿ

PD-19

ಮುದ್ರಕರು ಹಾಗೂ ಪ್ರಕಾಶಕರು:— ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA